MADAM SPEAKER.— I have received recommendation of the Governor for the consideration of the Karnataka Co-operative Soceities (Second Amendment) Bill, 1976 under Article 207 (3) of the constitution of India.

KARNATAKA CO-OPERATIVE SOCIETIES (SECOND AMENDMENT) BILL, 1976

Motion to consider

4-30 P.M.

SRI K. H. RANGANATH (Minister for Co-operation).— I move :

"That the Karnataka Co-operative Societies (Second Amendment) Bill, 1976, be taken into consideration."

MR. DEPUTY SPEAKER.— Motion moved :

"That the Karnataka Co-operative Societies (Second Amendment) Bill, 1976, be taken into consideration."

†SRI K. H. RANGANATH.— Madam Speaker, this is very small Bill containing few clauses. This Bill is sought to replace the ordinance that has already come into existance and which is in operation. The object of the Government in bring out this Ordinance and replacing this Ordinance by this Bill is made quite abundantly clear in the statement of objects and reasons. The most important clauses of the Bill are clauses 2, 3 and 4. Clause 2 seeks to give powers to the Registrar to reorganise, amalgamate the societiee. This decision was taken by the Government since the credit societies numbering about 2700 were not functioning properly. The Government thought in the interests of making those institutions viable and fit instruments for implementing the economic programme of the Government, the new clause 14-A is introduced in Clause 4, section 30A is introduced. According to this clause the Government will have power to appoint a Special Officer to find out whether the co-operative institutions are working properly or not Clause 26A disqualifies the members of the Committee. The other clauses are consequential. With these few remarks, I commend this Bill for the approval of this august House.

† ಶ್ರೀ ಕೋಣಂದೂರು ಲಿಂಗಪ್ಪ.— (ತೀರ್ಥಹಳ್ಳಿ) ಸನ್ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸಹಕಾರ ಸಚಿವರು ಈ ಸಭೆಯು ಮುಂದೆ ತಂದಿರತಕ್ಕಂಥಾ ೧೯೭೬ನೇ ಇಸವಿಯ ಕರ್ನಾಟಕ ರಾಜ್ಯದ ಸಹಕಾರಿ ಸಂಘಗಳಿಗೆ ಸಂಬಂಧಿಸಿದ ಎರಡನೇ ತಿದ್ದುಪಡಿ ಮಸೂದೆ ಏನಿದೆ ಇದನ್ನು ನಾನು ಸ್ವಾಗತಿಸಿ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ನಾನು ಈ ಮಾತನ್ನು ಹೇಳಿದರೆ ಬಹುಶಃ ಯಾರೂ ಅನ್ಯಥಾ ಭಾವಿಸುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಇತ್ತೀಚೆಗೆ ಈ ಸಹಕಾರ ಇಲಾಖೆ ಶ್ರೀಮಾನ್ ರಂಗನಾಥ್ ಅವರ ಕೈಗೆ ಸಿಕ್ಕಿದ ಮೇಲೆ ಅದಕ್ಕೆ ಒಂದು ಕಾಯಕಲ್ಪ ಆಗುತ್ತಿದೆ. ಇದು ನಾವು ಮೆಚ್ಚುವಂತಹ

ವಿಷಯ. ಇದುವರೆಗೆ ಸಹಕಾರ ಎನ್ನುವುದು ಸ್ವಾಹಾಕಾರವಾಗಿತ್ತು. ಸ್ವಾಹಕಾರರು ದೊಡ್ಡದೊಡ ಗದ್ದುಗೆಯಲ್ಲಿ ಕುಳಿತುಕೊಂಡು ದೊಡ್ಡ ದೊಡ್ಡ ರೀತಿಯಲ್ಲಿ ಹಣಗನ್ನು ಮುಳುಗಿಸಿರತಕ್ಕ ಪ್ರಭೃತಿಗಳು ಇನ್ನೂ ಜೀವಂತವಾಗಿದ್ದಾರೆ. ಬಹಳ ಧಢೂತಿ ಜನ ದೊಡ್ಡ ದೊಡ್ಡ ಕಾಲನ್ನು ಹಾಕಿ ದೊಡ್ಡ ಚೀಲವನ್ನು ಹೊಡೆಯುತ್ತಿದ್ದರು. ಇವೊತ್ತು ಸಹಕಾರ ಸಂಸ್ಥೆಗಳು ಏನಿವೆ ಇವುಗಳಲ್ಲಿ ಇರತಕ್ಕ ಅಧಿಕಾರಿಗಳ ಜೊತೆಯಲ್ಲಿ ಕೆಲವು ಜನಗಳು ಸೇರಿಕೊಂಡು ಈಗ ಸುಮಾರು ೩೦ ವರ್ಷ ಗಳಿಂದ ಮೇದು ಮೇದು ಮರಿ ಹುಲಿಗಳು ಹೆಬ್ಬುಲಿಗಳಾಗಿವೆ. ಸಣ್ಣ ಸಣ್ಣ ಸೊಸೈಟಿಗಳಲ್ಲಿ ತಿಂದು ತೇಗಿ ಅವರು ರಾಜ್ಯದ ಬೊಕ್ಕಸಕ್ಕೂ ಕೈಹಾಕುವಂತ ಮಹಾ ಪ್ರಭೃತಿಗಳಿದ್ದಾರೆ. ಅವರು ಎಲ್ಲಿ ಇದ್ದಾರೆ ಎಂಬುದನ್ನು ಹೇಳಬೇಕಾಗಿಲ್ಲ. ಅಂಥವರಿಗೆ ಬುದ್ಧಿಯನ್ನು ಕಲಿಸತಕ್ಕ ಮತ್ತು ಸಹಕಾರಿ ಆಂಧೋಳನವಲ್ಲಿ ಒಂದು ಹೊಸ ಚೇತನವನ್ನು ತುಂಬತಕ್ಕ ಪ್ರಯೋಗವನ್ನು ಏನು ಶ್ರೀಮಾನ್ ರಂಗನಾಥ್ ಅವರು ಮಾಡುತ್ತಿದ್ದಾರೆ ಅದು ಸ್ವಾಗತಾರ್ಹವಾಗಿದೆ. ಯಾವುದೇ ದೇಶದಲ್ಲಾಗಲೀ ಸಹಕಾರಿ ಆಂಧೋಳನ ಏನಿದೆ ಅದನ್ನು ಯಶಸ್ವಿಯಾಗಿ ಮಾಡದೇ ಹೋದರೆ ನಿಜವಾಗಿ ಬಡವರಿಗೆ ಯಾವರೀತಿಯಲ್ಲೂ ಉಪಕಾರ ಮಾಡಿದಂತಾಗುವುದಿಲ್ಲ. ಮತ್ತು ಬೆಳೆಸಿದಂತಾಗುವುದಿಲ್ಲ ಶ್ರೀ ರಾಬರ್ಟ್ ಕೋಹನ್ ಸಹಕಾರಿ ಆಂಧೋಳನವನ್ನು ಪ್ರಾರಂಭ ಮಾಡಿದಂದಿನಿಂದ ಸೃಷ್ಟಿ ಮಾಡಿದಂದಿನಿಂದ ಈ ಸಹಕಾರಿ ಆಂಧೋಳನ ಜಗತ್ತಿನಲ್ಲಿ ಬಹಳ ದೊಡ್ಡದಾಗಿ ಬೆಳೆದಿದೆ. ಈ ವಿಷಯದಲ್ಲಿ ನಮ್ಮ ರಾಜ್ಯದಲ್ಲಿ ತೆಗೆದುಕೊಳ್ಳಬೇಕಾದರೆ ಹಳೆಯ ಕೊಳೆಯ ಕತೆಯನ್ನು ಹೇಳುವುದಕ್ಕೆ ಹೋಗುವುದಿಲ್ಲ ಒಟ್ಟಿನಲ್ಲಿ ಲಕ್ಷಗಟ್ಟಲೆ ಕೋಟಿ ಗಟ್ಟಲೆ ರೂಪಾಯಿಗಳನ್ನು ಸೊಸೈಟಿಗಳಲ್ಲಿ ಮುಳುಗಿಸಿರತಕ್ಕ ಮಹಾನುಭಾವರು, ಮಹಾ ಪ್ರಭೃತಿಗಳು ಏನಿದ್ದಾರೆ ಅವರ ಬಗ್ಗೆ ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳುವುದು ಅವಶ್ಯಕ. ನಮ್ಮ ರಾಜ್ಯದಲ್ಲಿ ಸುಮಾರು ೮೭೦೦ಸೊಸೈಟಿಗಳು ಹಳ್ಳಿಹಳ್ಳಿಗಳಲ್ಲಿ ಇಡೀ ರಾಜ್ಯಾದ್ಯಂತ ಇವೆ. ನಮ್ಮ ಸ್ನೇಹಿತರು ಹೇಳಿದ ಹಾಗೆ ಮೊನ್ನೆ ತಾನೆ ಶ್ರೀಮಾನ್ ರಂಗನಾಥ್ ಅವರು ನಮ್ಮ ತೀರ್ಥಹಳ್ಳಿಗೆ ಬಂದಿದ್ದಾಗ ಹೇಳಿದ ಹಾಗೆ ಅನೇಕ ಸೊಸೈಟಿ ಗಳು ಒಂದು ಚರ್ಮದ ಚೀಲದಲ್ಲಿವೆ. ಕೆಲವು ಪಂಚಾಯಿತಿಗಳೂ ಹಾಗೆಯೇ ಇವೆ. ಚರ್ಮದ ಚೀಲ ದಲ್ಲಿ ಪ್ಯಾಡು ಶೀಲು ಮತ್ತು ಲೆಟರ್ ಹೆಡ್‌ಗಳು ಇವೆ. ಆದ್ದರಿಂದ ಚರ್ಮದ ಚೀಲದ ಸೊಸೈಟಿಗಳು ಏನಿವೆ ಅವುಗಳನ್ನು ನೂರಾರು ಸಾವಿರಾರು ಇರುವ ಬದಲು ಒಂದು ಸರಿಯಾದ ಹತೋಟಿಗೆ ಒಳಪಟ್ಟು ಏಕೀಭವಿಸಿ ಎಂದರೆ ಅಮಾಲ್ಗ ಮೇಟ್ ಮಾಡಿ ಅವುಗಳ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುವುದು ಸ್ವಾಗತಾರ್ಹ. ಮತ್ತು ಒಳ್ಳೆಯ ಕ್ರಮ. ಈ ಬಗ್ಗೆ ವಾಸ್ತವವಾಗಿ ಒಂದು ಮಾತು ಹೇಳಬೇಕೆಂದರೆ ಈಗ ಎಷ್ಟೋ ಸೊಸೈಟಿಗಳು ಸುಧಾರಣೆಯಾಗಿವೆ. ಕೆಟ್ಟ ಮತ್ತು ದುರವಸ್ಥೆಯಲ್ಲಿದ್ದಂತಹ ಸೊಸೈಟಿಗಳು ಒಳ್ಳೆಯ ಸೊಸೈಟಿಗಳಾಗಿವೆ. ಆ ಸೊಸೈಟಿಗಳಿಗೆ ಒಳ್ಳೆಯ ಸದಸ್ಯರನ್ನು ಅನೇಕ ಸೊಸೈಟಿಗಳಿಗೆ ಅನೇಕ ಸದಸ್ಯರನ್ನು ಸರ್ಕಾರದವರು ನಾಮಕರಣ ಮಾಡಿದ್ದಾರೆ. ಚರ್ಮದ ಸೊಸೈಟಿಗಳಲ್ಲಿ ಬಹಳ ಜನ ಡಿಫಾಲ್ಟರುಗಳು ಇದ್ದಾರೆ. ಬಡವರಿಗೆ ವಂಚನೆ ಮಾಡತಕ್ಕ ಳ೨೦ಗಳು ಆ ಸೊಸೈಟಿಗಳಲ್ಲಿದ್ದಾರೆ. ಅಂಥವರನ್ನು ತೆಗೆದು ಹಾಕಬೇಕು. ಈಗ ಪುನರ್ ವ್ಯವಸ್ಥೆಗೆ ಒಳಪಟ್ಟಿರುವ ಸಹಕಾರ ಸಂಘಗಳಿಗೆ ಆಡಳಿತ ಮಂಡಲಿಗೆ ನಾಮಕರಣ ಮಾಡಿರುವುದು ಸಮರ್ಪಕವಾಗಿಲ್ಲ. ಅಲ್ಲಿ ಈಗ ಖದೀಮರು ತೂರಿಕೊಂಡು ಬಂದಿದ್ದಾರೆ. ಸಹಕಾರ ಇಲಾಖೆಯಲ್ಲಿ ಒಳ್ಳೆಯ ಅಧಿಕಾರಿಗಳೂ ಇದ್ದಾರೆ ಎಲ್ಲಾ ಕೆಟ್ಟವರು ಎಂದು ಹೇಳುವುದಕ್ಕಾಗುವುದಿಲ್ಲ. ವಿಲೀನೀಕರಣಕ್ಕೆ ಒಳಪಟ್ಟಿರುವ ನೂತನ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಡೈರೆಕ್ಟರುಗಳನು ನೇಮಕ ಮಾಡುವಾಗ ನಮ್ಮ ತಾಲ್ಲೂಕಿನಲ್ಲಿಯೇ ಅಲ್ಲ ಯಾವ ತಾಲ್ಲೂಕಿನಲ್ಲಿಯೂ ಆಯಾ ಸ್ಥಳೀಯ ಶಾಸಕರನ್ನು ಕೇಳಲಿಲ್ಲ, ಯಾರು ಯಾರನ್ನೋ ಅವರ ಮನಸ್ಸಿಗೆ ಬಂದವರನ್ನು ಆಡಳಿತ ಮಂಡಲಿಗೆ ನೇಮಕ ಮಾಡಿದ್ದಾರೆ. ಈ ರೀತಿ ಹೊಸದಾಗಿ ನಾಮಕರಣವಾಗಿರತಕ್ಕ ಜನ ಏನಿದ್ದಾರೆ ಅವರ ಚರಿತ್ರ ಮತ್ತು ಇತಿಹಾಸವನ್ನು ಸ್ವಲ್ಪ ತರಿಸಿಕೊಂಡು ನೋಡಬೇಕು. ನಮ್ಮಲ್ಲಿ ಅಖಂಡಮುಖಂಡರು ಇದ್ದಾರೆ. ಆ ಕಡೆಯೂ ಇದ್ದಾರೆ. ಈ ಕಡೆಯೂ ಇದ್ದಾರೆ. ಈಗ ಹೊಸದಾಗಿ ಈ ಕಡೆಯಿಂದ ಆ ಕಡೆಗೆ ಹೋದವರಲ್ಲಿಯೂ ಅಖಂಡಮುಖಂಡರಿದ್ದಾರೆ. ಈ ರೀತಿಯಾಗಿ ಸಹಕಾರ ಸಂಘಗಳಿಗೆ ಈಗ ಆಡಳಿತ ಮಂಡಲಿಗೆ ಹೊಸದಾಗಿ ನೇಮಕ ಮಾಡಿರತಕ್ಕವರಲ್ಲಿ ಲಕ್ಷಗಟ್ಟಲೆ ಕೋಟಿಗಟ್ಟಲೆ ರೂಪಾಯಿಗಳನ್ನು ತಿಂದು ಸೊಸೈಟಿಗಳನ್ನು ಮುಳುಗಿಸಿರತಕ್ಕವರು ಇದ್ದಾರೆ. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಈ ಸೊಸೈಟಿಗಳನ್ನು ಈಗ ಪುನರ್ ವ್ಯವಸ್ಥೆಗೊಳಿಸಿ ಸುಧಾರಣೆ ಮಾಡಿ ಇವುಗಳ ಆಡಳಿತ ಮಂಡಲಿಗೆ ಹೊಸಬರನ್ನು ನಾಮಕರಣ ಮಾಡಿದರೂ ಕೂಡ ಈ ಸೊಸೈಟಿಗಳು ಯಥಾ ಪ್ರಕಾರ ಹಿಂದಿನ ಹಾಗೆ ಆಗುತ್ತವೆಯೋ ಏನೋ? ಎನ್ನುವ ಶಂಕೆ ನನಗೆ ಇದೆ.

ಉದಾಹರಣೆಗೆ ಹೇಳುವುದಾದರೆ, ತಮಗೆ ಗೊತ್ತಿದೆ, ಕೆಲವು ಸೊಸೈಟಿಗಳಲ್ಲಿ ಎಂತಹ ಜನ ಇದ್ದಾರೆ ಎಂದರೆ, ಲಕ್ಷಗಟ್ಟಲೆ ಹೊಡೆದು ತಿಂದು, ಎನ್‌ಕ್ವೈರಿಗೆ ಬರುತ್ತಾರೆ ಎಂದು ಹೇಳಿದ ಕೂಡಲೇ ಇದ್ದಂಥ ಕಾಗದ ಪತ್ರಗಳನ್ನು ಭಸ್ಮಮಾಡಿ, ಆ ವಿಭೂತಿಯನ್ನು ಹೋದವರಿಗೆ, ಸರ್ಕಾರಕ್ಕೆ, ಮಂತ್ರಿ ಜನಕ್ಕೆ ನಾಮವನ್ನು ಹಾಕತಕ್ಕಂಥ ಜನ ಇವತ್ತು ತಮ್ಮ ಎಡಬಲದಲ್ಲಿದ್ದಾರೆ. ಅವರಿಗೆ ರಕ್ಷಾಕವಚ ಯಾವುವೆಂದರೆ ಜನರ ಮುಖಂಡ ನಾನು ಕಾಂಗ್ರೆಸ್ ನಾನು, ಯೂತ್ ಕಾಂಗ್ರೆಸ್ ನಾನು, ಕಿಸಾನ್ ಸೆಲ್ ನಾನು ಎಂದು ಹೇಳತಕ್ಕಂಥಾದ್ದೇ ಅವರಿಗೆ ರಕ್ಷಾಕವಚ. ಈ ಒಂದು ಗುರಾಣಿಯನ್ನಿಟ್ಟುಕೊಂಡು ಲಕ್ಷಗಟ್ಟಲೆ ಹಣವನ್ನು ಲೂಟಿ ಮಾಡಿರತಕ್ಕ ಜನ ಇವತ್ತಿಗೂ ಇದ್ದಾರೆ. ಈ ವಿಚಾರವನ್ನು ತಮಗೆ ಹೇಳಿದರೆ ತಾವು ಬೇರೆ ಬೇರೆ ವ್ಯಾಖ್ಯಾನವನ್ನು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೀರಿ. ಆದುದರಿಂದ ೨೦ ಪಾಯಿಂಟ್ ಪ್ರಚಾರದಲ್ಲಿ ಖೂಳರುಗಳು ಯಾರಿದ್ದಾರೆ, ಯಾರನ್ನು ಸೊಸೈಟಿಗಳಲ್ಲಿ ಹಾಕಿಟ್ಟಿದ್ದೀರಿ ಅದನ್ನೆಲ್ಲಾ ಪುನರ್ ವಿಮರ್ಶೆಮಾಡಿ, ಅದರಲ್ಲಿ ಯಾರು ಪ್ರಾಮಾಣಿಕರಾಗಿರುತ್ತಾರೋ, ಯಾರಿಗೆ ನಿಜವಾಗಿ ಜನಸೇವೆ ಮಾಡತಕ್ಕ ಮನೋಭಾವ ಇರುತ್ತದೋ, ಯಾರು ಸ್ವಚ್ಛರು ಇರುತ್ತಾರೋ ಅಂತಹವರನ್ನು ಸೊಸೈಟಿಗಳಲ್ಲಿ ಹಾಕಬೇಕು.

SRI K. H. RANGANATH.—I am sorry for his remarks. I do not know in his constituency who are the defaulters. If the member were to pass on information I will definitely take action. I am not going to see that any defaulter is there on any co-operative society.

SRI H. D. DEVEGOWDA.—I went through the list pertaining to my own district. The people who are responsible for loss to the tune of Rs. 50,000 are there on the Board. They are Chairman.

SRI K. H. RANGANATH — I never said that all the people that are nominated are good. The Hon member was suggesting that I knew nominations in Theerthalli who are defaulters To that extent I said that I do not know that and if the member were to bring to my notice I will take action. I am not denying.

ಶ್ರೀ ಎಚ್. ಡಿ. ದೇವೇಗೌಡ.— ನಾವು ಒಳಗಡೆ ಇದ್ದಾಗಲೂ ಕೂಡ ಪತ್ರಿಕೆಗಳನ್ನು ಕಳುಹಿಸಿಕೊಡುತ್ತಿದ್ದರು. ಆರು ತಿಂಗಳೊಳಗೆ ಸಹಕಾರ ರಂಗದಲ್ಲಿ ಖದೀಮರನೆಲ್ಲಾ ನಿರ್ನಾಮ ಮಾಡುತ್ತೇವೆ ಎಂದು ಪಣ ತೊಟ್ಟಿದ್ದೀರಿ. ತಾವು ತಮ್ಮ ಇಲಾಖೆಯ ಸಿಬ್ಬಂದಿಯವರಿಂದ ಯಾರು ಖದೀಮರಿದ್ದಾರೆ ಅವರ ಬಗ್ಗೆ ಮಾಹಿತಿ ತರಿಸಿಕೊಳ್ಳುವುದಕ್ಕೆ ಅವಕಾಶ ಇದೆ. ನಾವು ಹೇಳಿದ ರಾಜಕೀಯ ದೃಷ್ಟಿಯಿಂದ ಹೇಳುತ್ತಾರೆ ಎನ್ನುವ ಭಾವನೆ ಮೂಡುತ್ತದೆ. ತಾವು ಆಡಳಿತ ಯಂತ್ರದ ಮುಖೇನ ಯಾರು ಕಳ್ಳರಿದ್ದಾರೆ, ಖದೀಮರಿದ್ದಾರೆ ಅವರನ್ನು ಪಟ್ಟಿಮಾಡಿ, ಅವರನ್ನು ಮಿಸಾ ಕಾನೂನು ಪ್ರಕಾರ ಒಳಗಡೆ ಇಡಬಹುದು. ನಿಮ್ಮ ಅಧಿಕಾರಿಗಳಿಂದ ಈ ಕಳ್ಳರ ಬಗ್ಗೆ ನೀವು ಮಾಹಿತಿ ಪಡೆದ ಮೇಲೆ ಅದರಲ್ಲಿ ಸತ್ಯಾಂಶ ಇದ್ದಮೇಲೆ, ಅದನ್ನು ಶುದ್ಧೀಕರಣ ಮಾಡಿ ನಿಮ್ಮ ಧ್ಯೇಯ ಮುಟ್ಟಲಿಕ್ಕೆ ಸಾಧ್ಯವಿದೆ.

ಶ್ರೀ ಕೊಣಂದೂರು ಲಿಂಗಪ್ಪ.— ಮಾನ್ಯ ಉಪಾಧ್ಯಕ್ಷರೇ, ಇವತ್ತು ಏನು ಹೊಸದಾಗಿ ರಂಗನಾಥ ಸೃಷ್ಟಿಯಾಗಿದೆ ಅದರಲ್ಲಿರತಕ್ಕ ಸೊಸೈಟಿಗಳಲ್ಲಿ ಮಾನ್ಯ ದೇವೇಗೌಡರು ಹೇಳಿದಹಾಗೆ ಮಂತ್ರಿಮಂಡಲ ಅವಕ್ಕೆ ಕಾಯಕಲ್ಪ ಮಾಡಬೇಕಾದ ಅನಿವಾರ್ಯ ಪ್ರಸಂಗ ಬಂದಿದೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಕೆಲವು ಸೊಸೈಟಿಗಳಿಗೆ ನಮ್ಮ ತಾಲ್ಲೂಕಿನಲ್ಲಿ ಸಕ್ಕರೆ ಸೊಸೈಟಿ ಇದೆ.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು) .— ಸಹಕಾರ ಸಂಘಗಳನ್ನು ಹೊಸದಾಗಿ ಪುನರ್ವಿಂಗಡಣೆ ಮಾಡುವ ಕಾಲದಲ್ಲಿ ಸರ್ಕಾರದ ಆಸೆ ಏನು ಇತ್ತು ಎನ್ನುವುದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಬಹುಶಃ ಅವರು ನಮ್ಮ ಮನೋಭಿಪ್ರಾಯಕ್ಕೆ, ಈ ಒಂದು ಬದಲಾವಣೆಗೆ ಆಕ್ಷೇಪಣೆ ಮಾಡುವುದಿಲ್ಲ ಎಂದು ನನ್ನ ಭಾವನೆ. ಆದರೆ ವ್ಯವಹಾರದಲ್ಲಿ ಸಂದರ್ಭಾನುಸಾರ ನಮಗೆ ಗೊತ್ತಿಲ್ಲದೆ ಇಂತಹ ಹೆಸರುಗಳು ಬಂದು ಅವರ ಪೂರ್ವ ಚರಿತ್ರೆ, ಅವರ ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡಿದ್ದು, ಅವರು ಅನೇಕ ತಪ್ಪುಗಳಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ, ಅದಕ್ಕೆ

ಕಾರಣ ಬೇಕಾದಷ್ಟು ಇದೆ. ಆದುದರಿಂದ ಈ ಆಕ್ಟ್‌ನಲ್ಲಿ ಒಂದು ಪ್ರಾವಿಷನ್ ಮಾಡಿಕೊಂಡಿದ್ದಾರೆ. ನನಗೆ ತಿಳಿದ ಹಾಗೆ ಕಾಲದ ಮಿತಿಯಿಂದ, ಬೇಗ ಬೇಗ ಮಾಡಬೇಕು ಎನ್ನುವ ಆತುರದಲ್ಲಿ ಸ್ವಲ್ಪ ಮಟ್ಟಿಗೆ ಅಲ್ಲಲ್ಲಿ ಯಾರು ಬರಬಾರದಾಗಿತ್ತೋ ಅಂಥವರ ಹೆಸರುಗಳು ನಾಮಿನೇಟ್ ಆಗಿರುವುದು ಛೇರ್‌ಮನ್‌ಗಳಾಗಿರುವುದು ಆಗಿದೆ. ಒಂದೊಂದು ಸಂದರ್ಭದಲ್ಲಿ ಸ್ಥಳೀಕವಾಗಿ ಸದಸ್ಯರುಗಳು ಇಂಥವರನ್ನು ಹಾಕಬೇಕು ಎಂದು ಹೇಳಿದಾಗ ಅವರೂ ಕೂಡ ಡಿಪಾರ್ಟ್‌ಮೆಂಟ್‌ಗಳಿಂದ ರೆಕಮೆಂಡಾಗಿ ಬಂದಿರುತ್ತಾರೆ. ಸುಮಾರು ೮ ಸಹಸ್ರ ಚಿಲ್ಲರೆ ಸೊಸೈಟಿಗಳನ್ನು ಈಗ ರೀ ಆರ್ಗನೈಸ್ ಮಾಡಬೇಕಾಗಿರುವುದು. ೮ ಸಹಸ್ರ ಸೊಸೈಟಿಗಳನ್ನು ೫ ಸಹಸ್ರಕ್ಕೆ ಇಳಿಸಬೇಕಾಗಿರುವುದರಿಂದ ೫ ಸಹಸ್ರ × ೯ = ೪೫, ೫೦ ಸಹಸ್ರ ಹೆಸರು ಬೇಕಾಗುತ್ತದೆ. ತಮಗೆ ಇದರಿಂದ ಅರ್ಥವಾಗುತ್ತದೆ, ಒಂದು ಕಡೆಯಿಂದ ಇವರು ಚರಿತ್ರೆಯನ್ನು ನೋಡಿಕೊಂಡು ಹೊರಟರೆ ಒಂದು ವರ್ಷವಾದರೂ ಇದು ಮುಗಿಯುವುದಿಲ್ಲ. ಒಂದು ಕಡೆ ಸಾಲ ಕೊಡಬೇಕಾದಂಥ ಆತುರ ಇರುತ್ತದೆ. ನಮ್ಮ ಎಲ್ಲಾ ತರಹದ ಸಾಲಗಳು ಅಂದರೆ ಷಾರ್ಟ್ ಟರ್ಮ್ ಲೋನ್, ಮೀಡಿಯಂ ಟರ್ಮ್ ಲೋನ್ ಮತ್ತು ಲಾಂಗ್ ಟರ್ಮ್ ಲೋನ್ ಈ ಮೂರು ಸೇರಿಸಿ ಹೋದ ವರ್ಷ ರಫ್ಲಿ ೭೫ ಕೋಟಿ ಟಾರ್ಗೆಟ್‌ಗೆ ರೀಚ್ ಆಗಿದೆ. ಈ ಮೂರು ಮಟ್ಟದ ಸಾಲಗಳನ್ನು ಕೊಡಬೇಕು, ಕೆಲಸ ಮಾಡಬೇಕು ಎನ್ನುವುದು ನಮ್ಮ ಆಸೆ ಇತ್ತು. ಈ ಸೊಸೈಟಿಗಳನ್ನೆಲ್ಲಾ ರೀಆರ್ಗನೈಸ್ ಮಾಡಬೇಕು, ಮಾಡದೇ ಹೋದರೆ ಸಾಲಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಕಾರಣ ನಿಮಗೆ ಗೊತ್ತಿದೆ. ಪ್ರತಿಯೊಂದು ಸೊಸೈಟಿಗೆ ಸರ್ಕಾರದಿಂದ ಒಬ್ಬರನ್ನು ಸೆಕ್ರೆಟರಿಯಾಗಿ ಹಾಕಬೇಕಾದ್ದಿದೆ. ಆ ಆತುರದಲ್ಲಿ ಕೆಲವು ತಪ್ಪುಗಳು ಆಗಿರಬಹುದು, ಆಗಿಲ್ಲ ಎಂದು ನಾವು ಹೇಳುತ್ತಾ ಇಲ್ಲ. ಅದಕ್ಕೆ ಈಗ ನಾವು ಇಟ್ಟುಕೊಂಡಿರುವ ರೀತ್ಯ ಜಾಯಿಂಟ್ ರಿಜಿಸ್ಟ್ರಾರಿಗೆ ಒಂದು ಅಧಿಕಾರವನ್ನು ಕೊಟ್ಟಿದೆ. ಇದೆಲ್ಲಾ ನಾಮಿನೇಟ್ ಆದಮೇಲೂ ಕೂಡ ಯಾವುದೇ ಟೈಮಿನಲ್ಲಿಯಾದರೂ ಅರ್ಹತೆ ಇಲ್ಲದೇ ಇದ್ದಂಥ ಜನರನ್ನು ಹಾಕಿದ್ದರೆ ಅವರನ್ನು ವಜಾಮಾಡಿ ಬೇರೆಯವರನ್ನು ಹಾಕತಕ್ಕಂಥ ಪೂರ್ಣ ಅಧಿಕಾರವನ್ನು ಕೊಟ್ಟಿರುವುದರಿಂದ, ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುವುದು ಏನೆಂದರೆ ಸರ್ಕಾರ ಎಲ್ಲಾ ಗೊತ್ತಿದೆ ಎಂದು ಹೇಳುವುದಿಲ್ಲ, ಹೇಳಿದರೆ ಹುಚ್ಚುಮಾತಾಗುತ್ತದೆ. ತಮ್ಮ ತಮ್ಮ ಕ್ಷೇತ್ರದಲ್ಲಿ ನಿರ್ದಿಷ್ಟವಾಗಿ ಅಂತಹ ಜನ ಇದ್ದಾರೆ ಎಂದು ಗೊತ್ತಾದರೆ ದಯಮಾಡಿ ತಿಳಿಸಬೇಕು. ನಾವು ಯಾರ ದಾಕ್ಷಿಣ್ಯವೂ ಇಲ್ಲದೆ ಅರ್ಹತೆ ಇಲ್ಲದೇ ಇರತಕ್ಕಂಥ ಜನ ಇದ್ದರೆ, ಖಂಡಿತವಾಗಿ ಬದಲಾವಣೆಮಾಡಿ ಅರ್ಹರಾದ ಜನರನ್ನು ಹಾಕೋಣ. ಅದರಲ್ಲಿ ತಮ್ಮ ಅಭಿಪ್ರಾಯಕ್ಕೆ ನಮ್ಮ ಯಾವ ವಿರೋಧವೂ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.— ಗ್ರಾಮಗಳನ್ನು ಏಕೀಭವಿಸಿರುವುದರಿಂದ ಬಹಳ ತೊಂದರೆಯಾಗಿದೆ. ನಮ್ಮ ಮಲೆನಾಡಿನಲ್ಲಿ ಒಂದು ಹಳ್ಳಿಗೂ ಮತ್ತೊಂದು ಹಳ್ಳಿಗೂ ೬—೮ ಮೈಲಿ ದೂರ ಇರುತ್ತದೆ. ೬–೮–೯ ಗ್ರಾಮಗಳನ್ನು ಸೇರಿಸುವಾಗ ಅದರ ಹೆಡ್‌ಕ್ವಾರ್ಟರ್ಸ್‌ನ್ನು ಒಂದು ಕಡೆ ಮಾಡಿರುತ್ತಾರೆ. ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ೬-೮ ಮೈಲಿ ದೂರ ಇರುತ್ತದೆ. ಅಲ್ಲಿಂದ ಬರುವುದು ಬಹು ಪ್ರಯಾಸದ ಕೆಲಸ. ಬಸ್ ಸೌಕರ್ಯ ಇಲ್ಲ. ಮಳೆಗಾಲದಲ್ಲಿ ಆ ಸೊಸೈಟಿಗೆ ಬಂದು ಹೋಗುವುದು ಬಹಳ ಕಷ್ಟದ ಕೆಲಸ. ಒಂದು ಲೀಟರ್ ಸೀಮೆ ಎಣ್ಣೆಗೆ, ಒಂದು ಕೆ. ಜಿ. ಸಕ್ಕರೆಗೆ ೯ ಮೈಲಿ ಅಂದರೆ ಬೆಳಿಗ್ಗೆ ಬಂದರೆ ರಾತ್ರಿ ಹೋಗುತ್ತಾನೆ. ಸಕ್ಕರೆ, ಸೀಮೆ ಎಣ್ಣೆ, ಅಲ್ಲೇ ಪೂರ್ತಿ ಖರ್ಚಾಗುವುದು ತಮಗೆ ಗೊತ್ತಿದೆ. ಅಪ್ಪಿತಪ್ಪಿ ಒಂದು ಮೂಟೆ ಸಕ್ಕರೆ, ಸ್ವಲ್ಪ ಸೀಮೆ ಎಣ್ಣೆ ಸೊಸೈಟಿಗೆ ಹೋದರೆ ಅಲ್ಲೇ ಆ ಊರಿನಲ್ಲೇ ಮೊದಲು ಖರ್ಚಾಗುತ್ತದೆ, ಹಳ್ಳಿಯಿಂದ ಬರತಕ್ಕವರಿಗೆ ಸಿಕ್ಕುವುದಿಲ್ಲ. ಕೆಲವು ಸೊಸೈಟಿಗಳು ನಿಜವಾಗಿಯೂ ಮೊದಲಿನಿಂದ ಚೆನ್ನಾಗಿ ನಡೆಸಿಕೊಂಡೇ ಬರುತ್ತಿವೆ. ಇನ್ನು ಕೆಲವು ಸೊಸೈಟಿಗಳು ಚೆನ್ನಾಗಿ ನಡೆಸಿಕೊಂಡು ಬಾರದೇ ಇರುವುವೂ ನಮ್ಮಲ್ಲಿವೆ. ಅವುಗಳನ್ನು ಇಂತಹವರ ಜೊತೆಯಲ್ಲಿ ಸೇರಿಸಿ ಸೊಸೈಟಿ ಕೇಂದ್ರಗಳನ್ನು ಬೇರೆ ಈಗ ಮಾಡಿದ್ದೀರಿ. ಅಂತಹ ಸೊಸೈಟಿಗಳು ಈಗ ಈ ದೇಶದಲ್ಲಿ ಬೇಕಾದಷ್ಟು ಇವೆ. ಆ ಸೊಸೈಟಿಗಳು ಈಗ ಕೇಂದ್ರ ಸೊಸೈಟಿಗಳನ್ನು ಮಾಡಿಕೊಂಡು ಅದರಲ್ಲಿರತಕ್ಕ ಮಹಾನುಭಾವರುಗಳು ನಾನಾ ರೀತಿಯ ಸೊಸೈಟಿಗಳನ್ನು ಮಾಡುತ್ತೇವೆಂದು ಹೇಳಿಕೊಂಡು, ಆ ರೀತಿಯಾಗಿ ಈಗಾಗಲೇ ಸ್ಥಾಪನೆಮಾಡಿಕೊಂಡು ಎಷ್ಟೆಷ್ಟು ಅಲ್ಲಿ ತಿನ್ನಬೇಕೋ ಅಷ್ಟನ್ನು ತಿಂದು ತೇಗುತ್ತಿದ್ದಾರೆ. ಅವರಲ್ಲಿ ಅನೇಕರು ಜೈಲಿಗೆ ಹೋಗುವುದನ್ನು ತಪ್ಪಿಸಿಕೊಂಡು ಕಾಂಗ್ರೆಸ್ ಹೆಸರಿನಲ್ಲಿಯೇ ಅಂತಹ ಸೊಸೈಟಿಗಳು ಇನ್ನೂ ಉಳಿದುಕೊಂಡಿವೆ. ಅಂತಹುಗಳ ಬಗ್ಗೆ ಸರ್ಕಾರಕ್ಕೆ ಎಷ್ಟೋ ಅರ್ಜಿಗಳು ಬಂದಿದ್ದರೂ ಅವುಗಳ ಕಡೆಗೆ ಸಾಕಷ್ಟು ಸರ್ಕಾರ ಗಮನ ಕೊಡುತ್ತಿಲ್ಲ. ಆದ್ದರಿಂದ ಈಗಲಾದರೂ ಅಂತಹ ಸೊಸೈಟಿಗಳನ್ನು ಚೆನ್ನಾಗಿ ರೀ–ಆರ್ಗನೈಜ್ ಮಾಡಿ ಯಾವ್ಯಾವ ಸೊಸೈಟಿಗಳು ಮೊದಲಿನಿಂದಲೂ ಅನೇಕ ವರ್ಷಗಳ ಕಾಲ ಚೆನ್ನಾಗಿ ನಡೆಸಿಕೊಂಡು ಬಂದಿವೆಯೋ ಅವು ಇನ್ನೂ ಚೆನ್ನಾಗಿ

ನಡೆಸಿಕೊಂಡು ಹೋಗುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ, ಇತ್ತೀಚೆಗೆ ಪ್ರತಿಯೊಂದು ಹಳ್ಳಿಯಲ್ಲಿಯೂ ಮತ್ತು ಪ್ರತಿಯೊಂದು ಊರಿನಲ್ಲಿಯೂ ಅನೇಕ ಸೊಸೈಟಿಗಳಲ್ಲಿ ರಾಜಕೀಯ ಷುರುವಾಗಿವೆ, ಅವರ ಕಾಂಟ್ರಿಬ್ಯೂಷನ್ ಅಲ್ಲಿ ಇದೆ, ನನ್ನ ಅಭಿಪ್ರಾಯದ ಪ್ರಕಾರ ಸುಮಾರು ಮುವ್ವತ್ತು ವರ್ಷಗಳಿಂದಲೂ ನಾನು ನೋಡುತ್ತಿದ್ದೇನೆ. ನಮ್ಮ ಪರಂಪರೆಯಲ್ಲಿ ಮುನಿಸಿಪಾಲಿಟಿಗಳಲ್ಲಿ ಹಾಗೂ ಗ್ರಾಮಾಂತರ ಸೊಸೈಟಿಗಳಲ್ಲಿ ಹಿಂದೆ ಇಂತಹ ಒಂದು ರಾಜಕೀಯ ಬಂದು ಅಲ್ಲಿನ ದುಡ್ಡನ್ನು ಯಾರೂ ತಿಂದಿಲ್ಲವೆಂದು ನಾನು ಹೇಳಿದರೆ ತಪ್ಪಾಗಲಾರದು. ಕೆಲವರು ಸೊಸೈಟಿಗಳಲ್ಲಿ ರಾಜಕೀಯ ಪ್ರವೇಶವಾಗಿ ಮತ್ತಷ್ಟು ಅವನ್ನು ಕುಲಗೆಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇಂಥಾದ್ದನ್ನು ಅಂತಹ ಸೊಸೈಟಿಗಳಲ್ಲಿ ಸೇರಿಸಿಕೊಂಡಿರುವವರು ಖಂಡಿತವಾಗಿ ಕೈಬಿಡಬೇಕು. ಸಹಕಾರಿ ಆಂದೋಳನದಲ್ಲಿ ಯಾವ ಒಂದು ರಾಜಕೀಯ ಪಕ್ಷವೂ ಇರಬಾರದು. ಯಾರು ಸ್ವಚ್ಛ ಜನರಿದ್ದಾರೆ, ಯಾರು ಒಳ್ಳೆಯವರು ಇದ್ದಾರೆಯೋ ಅಂತಹವರನ್ನು ಮಾತ್ರ ಅಲ್ಲಿ ಇಡಬೇಕು. ಅಂತಹ ಕೆಲಸವನ್ನು ಸರ್ಕಾರ ಮಾಡಬೇಕು. ನಾನು ಈ ಸಂದರ್ಭದಲ್ಲಿ ನೀವು ಯಾರ್ಯಾರನ್ನು ನಾಮಕರಣ ಮಾಡಿದ್ದೀರೋ ಅಂತಹವರ ಹೆಸರನ್ನು ಇಲ್ಲಿ ಹೇಳಿದರೆ ನನಗೆ ಬಹಳ ಬೇಜಾರು ಆಗುತ್ತದೆ ನಮ್ಮ ಜೀವಮಾನದಲ್ಲಿ ನಾನು ನೋಡಿದಹಾಗೆ ಹಿಂದೆ ನಮ್ಮ ಸೊಸೈಟಿಗಳು ರಾಜಕೀಯದಲ್ಲಿ ಕೈಹಾಕಿಲ್ಲ. ಅದು ನಮ್ಮ ಪರಂಪರೆಯಲ್ಲಿಯೇ ಬಂದಿಲ್ಲ. ಇವತ್ತು ಎಲ್ಲೆಲ್ಲಿಯೂ ಅವರೇ. ನೀವು ಮಾಡತಕ್ಕ ಪ್ರತಿಯೊಂದು ಟ್ರಿಬ್ಯೂನಲ್‌ನಲ್ಲಿಯೂ ಅದೇ ರೀತಿಯಾಗಿ ಇದ್ದಾರೆ. ಈಗ ಇಂತಹ ಕಾಂಗ್ರೆಸ್ ಕಮಿಟಿ, ಅಂತಹ ಕಾಂಗ್ರೆಸ್ ಕಮಿಟಿ, ಸಣ್ಣ ಸಣ್ಣ ಯೂತ್ ಕಾಂಗ್ರೆಸ್‌ನವರು, ಮುಂದಿ ಕಾಂಗ್ರೆಸ್ ಹಳೇ ಕಾಂಗ್ರೆಸ್, ಹೊಸ ಕಾಂಗ್ರೆಸ್—ಹೀಗೆ ಹೇಳುವ ಒಂದು ವ್ಯವಸ್ಥೆಯಲ್ಲಿ ಇವತ್ತು ಏನಾಗಿದೆಯೆಂದರೆ......

ಶ್ರೀ ಸಿ. ಬೈರೇಗೌಡ.—ಈಗ ಅರಸರ ಕಾಂಗ್ರೆಸ್, ಕೆ. ಎಚ್. ಪಾಟೀಲರ ಕಾಂಗ್ರೆಸ್ ಮತ್ತು ಇನ್ನೂ ಏನೇನೋ ರಾಜಕೀಯ ಕಾಂಗ್ರೆಸ್ ಎಂಬುದಾಗಿ ಬೇರೆ ಇವೆ

ಶ್ರೀ ಕೊಣಂದೂರು ಲಿಂಗಪ್ಪ.—ಇವತ್ತು ಆ ಒಂದು ಮನೋಭಾವದಲ್ಲಿ ನಾಮಕರಣಗಳನ್ನು ಮಾಡುತ್ತಿದ್ದಾರೆ. ಅದನ್ನು ತಾವು ಕೈಬಿಡಬೇಕು. ನಿಷ್ಪಕ್ಷಪಾತ ಅಧಿಕಾರಿಗಳು ನಮ್ಮ ರಾಜ್ಯದಲ್ಲಿ ಇದ್ದಾರೆ ಅವರು ಬಹಳ ಯೋಗ್ಯರಾಗಿಯೂ ಇದ್ದಾರೆ. ನಿಮ್ಮ ರಿಜಿಸ್ಟ್ರಾರ್ ಅವರು ಬಹಳ ಸಚ್ಚರಾಗಿ ದಕ್ಷರಾದ ಅಧಿಕಾರಿಗಳಾಗಿದ್ದಾರೆ. ಹಾಗೆಯೇ ಇನ್ನೂ ಅನೇಕ ಜನ ಯೋಗ್ಯ ಅಧಿಕಾರಿಗಳು ನಿಮ್ಮಲ್ಲಿದ್ದಾರೆ. ಅಂತಹವರಿಗೆ ಈ ಅಧಿಕಾರವನ್ನು ಬಿಡಿ. ನೀವು ನಾವು ಇಬ್ಬರೂ ಅಧಿಕಾರದಲ್ಲಿ ಕೂತರೆ ನಿಮಗೆ ಬೇಕಾದವರಿಗೆ ನೀವು ನಾಮಕರಣಮಾಡುತ್ತೀರಿ, ನಮಗೆ ಬೇಕಾದವರಿಗೆ ನಾವು ನಾಮಕರಣ ಮಾಡುತ್ತೇವೆ, ನಮ್ಮ ಪಾರ್ಟಿ ಎಂದು ನಾವು ಬಿಡುವುದಿಲ್ಲ, ನಿಮ್ಮ ಪಾರ್ಟಿ ಎಂದು ನೀವು ಬಿಡುವುದಿಲ್ಲ. ಇಂತಹ ಸಮಸ್ಯೆಗಳು ಹುಟ್ಟುತ್ತವೆ ಆದ್ದರಿಂದ ಇದ್ಯಾವುದೂ ಬೇಡ. ನಿಸ್ಪೃಹರಾದಂಥ ಅಧಿಕಾರಿಗಳಿಗೆ ಈ ಜವಾಬ್ದಾರಿಯನ್ನು ವಹಿಸಿದರೆ, ಅವರು ಒಳ್ಳೆಯ ಅಧಿಕಾರಗಳನ್ನು ಈ ಒಂದು ಜವಾಬ್ದಾರಿ ಕೆಲಸವನ್ನು ಮಾಡಲು ನೇಮಿಸುತ್ತಾರೆ. ಇಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಇದರಲ್ಲಿ ವಿಶೇಷವಾದ ರಾಜಕೀಯವನ್ನು ಇಲ್ಲಿ ತಾರದೇ ಇರುವ ಹಾಗೆ ಮಾಡಬೇಕು. ಅದರಲ್ಲಿಯೂ ಮುಖ್ಯವಾಗಿ ರಾಜಕೀಯವನ್ನು ಮಾಡುವಂತಹ ಜನರನ್ನು ಇಲ್ಲಿಗೆ ನಾಮಕರಣ ಮಾಡದೇ ಇರುವ ಹಾಗೆ ತೀವ್ರ ಕ್ರಮವನ್ನು ತೆಗೆದುಕೊಳ್ಳಬೇಕು ಆದರೆ ಈಗ ಹೊಸದಾಗಿ ನಾಮಕರಣಮಾಡುವುದಕ್ಕೆ ಅವಕಾಶವಾಗಿರುವುದರಿಂದ, ಸ್ವಾರ್ಥಿಗಳು ಎಲ್ಲಿದ್ದಾರೆ, ಯಾರ ಹೆಗಲಮೇಲೆ ಕುಳಿತಿದ್ದಾರೆಯೋ ಅಂತಹವರನ್ನು ಗುರುತಿಸುವುದಕ್ಕೆ ಕಷ್ಟವಾಗುತ್ತದೆ. ನನಗೆ ತಿಳಿದಿರುವ ಹಾಗೆ ನಿಮ್ಮೆಲ್ಲರ ಹೆಗಲಮೇಲೂ ಈಗ ಅನೇಕ ಜನ ಸ್ವಾರ್ಥಿಗಳಿದ್ದಾರೆ. ಹಿಂದಿನಿಂದಲೂ ಚೆನ್ನಾಗಿ ತಿಂದು ತೇಗಿ ಈಗ ದೊಡ್ಡ ದೊಡ್ಡ ಗದ್ದುಗೆಯಲ್ಲಿ ಇದ್ದುಕೊಂಡು ಹಣವನ್ನು ಸಿಕ್ಕಾಪಟ್ಟೆ ಲೂಟಿ ಮಾಡುತ್ತಿದ್ದಾರೆ. ಅಂತಹವರ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೀರೆಂದು ಹೇಳಬೇಕು. ಹಿಂದಿನ ಕಾನೂನು ಪ್ರಕಾರ ಸುಮಾರು ಎರಡು ವರ್ಷಗಳಿಂದ ನಾಲ್ಕು ವರ್ಷಗಳಿಂದ ಸಹಕಾರ ಸಂಘಗಳಲ್ಲಿ ಕೆಲಸಮಾಡಿ ಅಲ್ಲಿ ಏನಾದರೂ ಅವರ ಬಗ್ಗೆ ಲೋಪದೋಷಗಳು ಬಂದು, ದೋಷಾರೋಪಣೆಯುಂಟಾದ ಪರಿಸ್ಥಿತಿಯಲ್ಲಿ ಅಂತಹವರನ್ನು ವಜಾ ಮಾಡುವ ಪರಿಸ್ಥಿತಿ ಇತ್ತು. ಅಂತಹ ಕ್ರಮವನ್ನು ತೆಗೆದುಕೊಳ್ಳುವುದು ಸ್ವಾಗತಾರ್ಹವಾದುದು ಹಿಂದೆ ಯಾರೇ ಸಹಕಾರ ಸಂಘಗಳಲ್ಲಿರಲಿ, ಅವನು ಮೂರು ಕಾಸು ತಿಂದಿರಲಿ, ಮೂರು ಸಾವಿರ ತಿಂದಿರಲಿ, ಮೂರು ಲಕ್ಷ ತಿಂದಿರಲಿ. ಮೂರು ಕೋಟಿ ರೂಪಾಯಿಗಳನ್ನು ತಿಂದಿರಲಿ ಅವನು ಯಾರೇ ಆಗಿರಲಿ, ಅಂದಿನಿಂದ ಇಂದಿನವರೆಗೆ ಸುಮಾರು ೨೦–೩೦ ವರ್ಷಗಳ ಅವಧಿಯಲ್ಲಿ ಸಾಮಾನ್ಯವಾಗಿ ಯಾರ್ಯಾರು ಸಾರ್ವಜನಿಕರ

ಹಣವನ್ನು ಸೊಸೈಟಿಗಳಲ್ಲಿ ತಿಂದಿದ್ದಾರೋ ಅಂತಹವರ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳಬೇಕು. ಅವನು ಜೀವಂತನಾಗಿದ್ದರೆ ಅವನ ಮೇಲೆ, ಜೀವಂತನಾಗದಿದ್ದರೆ ಅವರ ಮಕ್ಕಳ ಮೇಲೆ ಅಥವಾ ಅವನಿಗೆ ಇರತಕ್ಕ ಆಸ್ತಿಪಾಸ್ತಿಯಿಂದ ಅಲ್ಲಿ ದುರುಪಯೋಗವಾಗದಂಥ ಹಣವನ್ನೆಲ್ಲಾ ಕೂಡಲೇ ವಸೂಲುಮಾಡಲು ತೀವ್ರವಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು. ಆಗ ಯಾರ್‍ಯಾರು ಸಾರ್ವಜನಿಕರ ಹಣವನ್ನು ತಿಂದಿರುತ್ತಾರೋ ಅಂತಹವರು ಸಹಕಾರ ಸಂಘಗಳಲ್ಲಿ ಉಮೇದುವಾರರಾಗಿ ನಿಲ್ಲುವುದಕ್ಕಾಗಿ ನಿಮ್ಮ ಹತ್ತಿರ ಬಂದು ಪಟ್ಟಿಗಳನ್ನು ಕೊಡುವುದು ತಪ್ಪುತ್ತದೆ. ಯಾರಿಗೆ ಆ ಒಂದು ವಿಚಾರದಲ್ಲಿ ಸಂಶಯವಿಲ್ಲವೋ, ಧೈರ್ಯ ಇರುತ್ತದೋ, ಪ್ರಾಮಾಣಿಕತೆ ಇರುತ್ತದೋ ಅಂತಹವರು ಮಾತ್ರ ಮುಂದೆ ಬರುತ್ತಾರೆ. ಅಂತಹ ವಾತಾವರಣವನ್ನು ನೀವು ಸೃಷ್ಟಿಮಾಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆಮಾಡುತ್ತೇನೆ. ಸೊಸೈಟಿಗಳಲ್ಲಿ ಸಹಕಾರ ಆಂದೋಳನ ಏನಿದೆಯೋ ಅದು ಇನ್ನೂ ಹೆಚ್ಚಾಗಿ ಅಗತ್ಯವಾಗಿ ಬಲಗೊಳ್ಳುವುದಕ್ಕೆ ಮತ್ತು ಅದಕ್ಕೆ ಒಂದು ಹೊಸ ಕಾಯಕಲ್ಪ ಮಾಡುವುದಕ್ಕೆ ಅದರ ಬಗ್ಗೆ ಒಂದು ಜೀವಕಳೆಯನ್ನು ತುಂಬುವುದಕ್ಕೆ ಸಹಕಾರ ಸಚಿವರು ಏನು ಪ್ರಯತ್ನಮಾಡುತ್ತಿದ್ದಾರೋ ಅದಕ್ಕೆ ನಾನು ಅವರನ್ನು ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಗಟ್ಟಿ ಚಂದ್ರಶೇಖರ್ (ಗುಬ್ಬಿ),—ಸನ್ಮಾನ್ಯ ಅಧ್ಯಕ್ಷರೇ, ಈ ಸಹಕಾರ ತತ್ವದ ಬಗ್ಗೆ ನನಗೆ ಒಳ್ಳೆಯ ನಂಬಿಕೆ ಇದ್ದರೂ ನಮ್ಮ ದೇಶದಲ್ಲಿ ನಡೆಯುತ್ತಿರುವ ಪದ್ಧತಿಯನ್ನು ನೋಡಿದರೆ ನನಗೆ ಬಹಳ ಹೊಟ್ಟೆ ಉರಿದುಹೋಗುತ್ತದೆ. ಯಾವ ಮಂತ್ರಿ ಬಂದರೂ ಕೂಡ ಇದನ್ನು ಸರಿಮಾಡುವುದಕ್ಕೆ ಆಗಿಲ್ಲ. ಇದರಲ್ಲಿ ಏನಿದೆಯೋ ಏನೋ ಗೊತ್ತಿಲ್ಲ. ಹಿಂದೆ ಮಾನ್ಯ ಶ್ರೀ ಶಂಕರ ಆಳ್ವ ಅವರು ಇದ್ದಾಗ್ಗೆ ಅವರು ನೋಡುವ, ಮಾಡುವ ಎಂದು ಹೇಳುತ್ತಿದ್ದರು. ಆಮೇಲೆ ಮಾನ್ಯ ಶ್ರೀ ಸಿ. ಎನ್. ಪಾಟೀಲ್ ಅವರು ಬಂದರು. ಅವರು ಅದನ್ನು ನೋಡಲಿಕ್ಕೆ ಹತ್ತಿದ್ದೇನೆ ಮಾಡಲಿಕ್ಕೆ ಹತ್ತಿದ್ದೇನೆಂದು ಹೇಳುತ್ತಿದ್ದರು. ಈಗ ಮಾನ್ಯ ಶ್ರೀ ರಂಗನಾಥ್ ಅವರು ಈ ಇಲಾಖೆಯನ್ನು ತೆಗೆದುಕೊಂಡಿದ್ದಾರೆ. ಯಾಕೋ ಅವರ ಒಂದು ಹಿಡಿತಕ್ಕೂ ಇನ್ನೂ ಇದು ಸಿಕ್ಕಿಲ್ಲವೆಂದು ನನಗೆ ತೋಚುತ್ತದೆ. ಇದಕ್ಕೆ ಒಂದು ಗಾದೆಯನ್ನು ಹೇಳಬಹುದು. ಸಾಯುವುದಕ್ಕೆ ಮುಂಚೆಯೇ ಗಂಟು ಕಳ್ಳರು ಸೇರಿದಹಾಗೆ ಅನೇಕ ಸಂಘಗಳಲ್ಲಿ ಕೆಲವು ಜನ ಸೇರಿಕೊಂಡು ಅದರ ಆಡಳಿತವನ್ನೇ ಕೆಡಿಸುತ್ತಿದ್ದಾರೆ. ನಾನು ನೆನ್ನೆ-ಮೊನ್ನೆಯಿಂದ ನನ್ನ ಕ್ಷೇತ್ರದಲ್ಲಿ ಸುಮಾರು ಎರಡು-ಮೂರು ಸೊಸೈಟಿಗಳನ್ನು ನೋಡಿಕೊಂಡು ಬರುವುದೇ ನನ್ನ ಕೆಲಸವಾಗಿಬಿಟ್ಟಿದೆ. ಸೊಸೈಟಿಗಳ ಬಗ್ಗೆ ಮಾತನಾಡುವುದಕ್ಕೆ ನಮ್ಮ ಕರ್ಮವಾಗಿದೆ. ನನಗೆ ತಿಳಿದಿರುವ ಹಾಗೆ ಇವತ್ತು ಸಾಮಾನ್ಯವಾಗಿ ಎಲ್ಲಾ ಕಡೆಯೂ ಅನೇಕ ಸೊಸೈಟಿಗಳನ್ನು ಮಾಡಿದ್ದಾರೆ. ಅಲ್ಲೆಲ್ಲಾ ಸಕ್ಕರೆ, ಇತರ ದವಸಧಾನ್ಯಗಳನ್ನು ಕೊಡುತ್ತಿದ್ದಾರೆ, ಅವುಗಳ ವಿತರಣೆಯಲ್ಲಿ ಕಲ್ಲಿ ಬಹಳ ಅನ್ಯಾಯ, ಅನೀತಿಗಳಾಗಿವೆ, ಅಂತಹ ಸೊಸೈಟಿಗಳಿಂದಲೇ ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ. ಪ್ರತಿಯೊಂದು ಸೊಸೈಟಿಯಲ್ಲಿಯೂ ಬಿಲ್ ಹಾಕಿಸಿ ದವಸ ಧಾನ್ಯಗಳನ್ನೂ ಮತ್ತು ಸಕ್ಕರೆಯನ್ನು ಮಾರಾಟಮಾಡುತ್ತಾರೆ ಅಂಥಾದ್ದರಲ್ಲಿಯೂ ಕೆಲವರು ಅಲ್ಲಿ ಸೇರಿಕೊಂಡು ನಮಗೆ ಸಕ್ಕರೆ ಕೊಟ್ಟಿಲ್ಲ, ದವಸ ಧಾನ್ಯಗಳನ್ನು ಕೊಟ್ಟಿಲ್ಲ, ನೀವು ಇಂದಿರಾ ಗಾಂಧಿಯವರ ಸರ್ಕಾರಕ್ಕೆ ಓಟು ಕೊಡಬೇಡಿ ಎಂದು ನಮಗೆ ವಿರೋಧವಾಗಿ ದುಡಿಯುವವರು ವಿರೋಧಮಾಡುತ್ತಾರೆ. ಯಾವುದೋ ಒಂದು ಸೊಸೈಟಿಯಲ್ಲಿ ನಮ್ಮ ಊರಿನಲ್ಲಿಯೇ ಸುಮಾರು ನಾಲ್ಕುವರೆ ಕೋಟಿ ರೂಪಾಯಿಗಳಷ್ಟು ಹಣವನ್ನು ತಿಂದಿದ್ದಾರೆ ಎಂಬುದಾಗಿ ಹೇಳಿದರು. ನಾನು ಎಂ ಎಲ್.ಎ. ಆದಮೇಲೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ವಿಚಾರವಾಗಿ ಪತ್ರ ಬರೆದು ಇಷ್ಟು ಉದ್ದ, ಇಷ್ಟು ಅಗಲದಷ್ಟು ತಿಂದಿದ್ದಾರೆಂದು ಹೇಳಿದ್ದಕ್ಕೆ ಕೂಡಲೇ ಅವರು ಕ್ರಮ ತೆಗೆದುಕೊಂಡರು. ಹೀಗೆಯೇ ಇನ್ನೊಂದು ಸೊಸೈಟಿಯಲ್ಲಿ ಸುಮಾರು ಎರಡುಕಾಲು ಲಕ್ಷ ರೂಪಾಯಿಗಳನ್ನು ತಿಂದಿದ್ದಾರೆ. ಹೀಗೆ ನಾನಾ ಸೊಸೈಟಿಗಳಲ್ಲಿ ಬೇಕಾದಷ್ಟು ತಿಂದು ಕೋತಿ ಮೊಸರನ್ನ ತಿಂದು ಮೇಕೆ ಬಾಯಿಗೆ ಹೊರಸಿದಹಾಗೆ ಅಂತಹ ಸೊಸೈಟಿಗಳಲ್ಲಿ ಇರತಕ್ಕವರು ಬೇಕಾದಷ್ಟು ಹಣವನ್ನು ಲೂಟಿ ಮಾಡಿದ್ದಾರೆ. ಅಲ್ಲಿ ಒಬ್ಬ ಗುಮಾಸ್ತನನ್ನು ಅರೆಸ್ಟ್ ಮಾಡಿದ್ದಾರೆ. ತಾಲ್ಲೂಕು ಹೆಡ್‌ಕ್ವಾಟರರ್‌ಗಳಲ್ಲಿನ ಸೊಸೈಟಿಯಲ್ಲಿ ಎರಡುಕಾಲು ಲಕ್ಷ ತಿಂದಿದ್ದಾರೆಂದು ಹೇಳಿ ಅದೊಂದು ಪ್ರೆಸ್ಟೇಜ್ ಕೊಶ್ಚನ್ ಎಂದು ಪರಿಗಣಿಸಿ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ಸೊಸೈಟಿಯಲ್ಲಿ ಅದರ ನಾಲ್ಕರಷ್ಟು ತಿನ್ನುವುದಕ್ಕೆ ಪರುಮಾಡಿದ್ದಾರೆ. ಹೀಗಾಗಿ ಅನೇಕ ಸೊಸೈಟಿಗಳು ಡಿಫಾಲ್ಟ್ ಆಗಿವೆ. ಆದರೂ ಏತಕ್ಕೆ ಅವುಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡಿಲ್ಲ ? ಅಲ್ಲಿರುವ ಅಂತಹ ಜನಗಳನ್ನು ಏಕೆ ಶಿಕ್ಷೆಮಾಡಿಲ್ಲ ? ಇನ್ನೊಂದು ಕಡೆಯಲ್ಲಿರುವ ಸೊಸೈಟಿಯಲ್ಲಿ ೧೭೭೦ ರೂಪಾಯಿಗಳು ಚಿಲ್ಲರೆ ಹಣವನ್ನು ತಿಂದಿದ್ದಾರೆ. ಅಂತಹವರನ್ನು ಅರೆಸ್ಟ್ ಮಾಡಬೇಕೆಂದು ಹೇಳಿದರೂ ಇದುವರೆಗೆ ಏಕೆ ಇನ್ನೂ ಮಾಡಿಲ್ಲ ? ಇದರಲ್ಲಿ ಅಲ್ಲಿರತಕ್ಕ ಕೆಲವು ಅಧಿಕಾರಿಗಳು ಶಾಮೀಲು ಆಗಿದ್ದಾರೆ.

ಶ್ರೀ ಕೊಣಂದೂರು ಲಿಂಗಪ್ಪ.—ಅವರೆಲ್ಲೋ ನಿಮ್ಮ ಪಾರ್ಟಿಗೆ ಸೇರಿರಬಹುದು.

ಶ್ರೀ ಗಟ್ಟಿ ಚಂದ್ರಶೇಖರ್.—ಈಗ ಪಾರ್ಟಿ ವಿಷಯ ಇಲ್ಲಿ ಏಕೆ ಬೇಕು ? ನಾನು ಹೇಳುವುದು ಏನೆಂದರೆ, ಸೊಸೈಟಿಗಳಲ್ಲಿ ಗುಮಾಸ್ತರಾಗಿದ್ದುಕೊಂಡು ಸುಮಾರು ೩-೪ ಲಕ್ಷ ರೂಪಾಯಿಗಳನ್ನು ದುಡಿದಿದ್ದಾರೆ. ಆದರೆ ನಾವು ಕೇವಲ ಎಂ.ಎಲ್.ಎ. ಆಗಿ ನಾಲ್ಕು ವರ್ಷಗಳಾದರೂ ಕೂಡ ಇನ್ನೂ ಕೇವಲ ೧೦ ಸಾವಿರ ರೂಪಾಯಿಗಳನ್ನಾದರೂ ದುಡಿಯಲಿಕ್ಕಾಗಿಲ್ಲ. ಆದ್ದರಿಂದ ಯಾರ್ಯಾರು ಅಂತಹ ಸೊಸೈಟಿಗಳಲ್ಲಿ ಎಷ್ಟೆಷ್ಟು ದುಡ್ಡು ತಿಂದಿದ್ದಾರೋ ಅಂತಹವರ ಮೇಲೆ ಕಠಿಣ ಕ್ರಮವನ್ನು ತೆಗೆದುಕೊಳ್ಳಬೇಕು. ರೈತ ಸೇವಾ ಸಹಕಾರ ಸಂಘ ಹೋಗಿ ಈಗ ರೈತರ ಸೇವನೆ ಮಾಡುವ ಸಹಕಾರ ಸಂಘಗಳಾಗಿ ಮಾರ್ಪಟ್ಟಿವೆ. ನನಗೆ ಈ ಒಂದು ಸಂದರ್ಭದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಅದೇನೆಂದರೆ, ಸಾಮಾನ್ಯವಾಗಿ ಯಾರೇ ಸ್ವಾಮಿಗಳ ಮಠದಲ್ಲಿ ಯಾರಾದರೂ ಬಂದರೆ, ಅವನಿಗೆ ಊಟ ಹಾಕುತ್ತಾರೆ. ಯಾವನೋ ಒಬ್ಬ ಒಂದು ಸಾರಿ ಊಟ ಮಾಡಿ ಹೋಗುವಾಗ ತಾನು ಊಟ ಮಾಡಿದ ತಟ್ಟೆ ಮತ್ತು ಲೋಟವನ್ನು ಜೊತೆಯಲ್ಲಿ ತೆಗೆದುಕೊಂಡು ಹೋದ. ಆಗ ಅವರು ಅವನನ್ನು ಏನಯ್ಯಾ ಇದು, ನೀನು ಊಟ ಮಾಡಿದ್ದಲ್ಲದೆ ಹೋಗುವಾಗ ಲೋಟ ತಟ್ಟೆಯನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗುತ್ತಿದ್ದೀಯೋ ಎಂಬುದಾಗಿ ಪ್ರಶ್ನೆ ಮಾಡಿದರು. ಆಗ ಅವನು ಬುದ್ಧಿ ಇದು ನಮ್ಮ ಸಂಸ್ಕಾರ ಈ ರೀತಿ ತೆಗೆದುಕೊಂಡು ಹೋಗುವುದು ಎಂದು ಹೇಳಿದ. ಆಗ ಸ್ವಾಮಿಗಳು ಆಶ್ಚರ್ಯಪಟ್ಟು ಅವನಿಗೆ ಹೇಳಿ ಕಳುಹಿಸಿ ಸ್ವಾಮಿಗಳ ಶಿಷ್ಯರ ಮೂಲಕ ಅವನಿಗೆ ಮದುವೆಮಾಡಿ ಕಳುಹಿಸಿದರು. ಕೊನೆಯಲ್ಲಿ ಸ್ವಾಮಿಗಳು ಅವನಿಗೆ ಆಶೀರ್ವಾದ ಮಾಡಿ ಕಳುಹಿಸುವಾಗ, ನೀನು ಹೊಸದಾಗಿ ಸಂಸಾರವನ್ನು ಹೂಡುತ್ತೀಯೇ, ನಿನಗೆ ಇನ್ನೇನಾದರೂ ಬೇಕೇ ಎಂದು ಕೇಳಿದರು.

5-00 P. M.

೧೦ ಸಂಸಾರಗಳಿಗೆ ಆಗುವಷ್ಟು ಜಮಾಯಿಸಿಕೊಂಡಿದ್ದೇನೆಂದು ಶಿಷ್ಯನು ಹೇಳಿದ. ಆ ಮೇಲೆ ಗುರುಗಳು ಅವನ ಸಂಸಾರ ಪ್ರಾರಂಭ ಮಾಡುವುದಕ್ಕೆ ಅಪ್ಪಣೆ ಕೊಟ್ಟರು. ಗುರುಗಳ ಅಪ್ಪಣೆ ಪಡೆದು ಸಂಸಾರ ಪ್ರಾರಂಭ ಮಾಡಿದಮೇಲೆ ಅವರಿಗೆ ಒಂದು ಮಗುವು ಆಯಿತು. ಆದರೆ ಮಗುವು ಹುಟ್ಟುವುದಕ್ಕೆ ಮುಂಚೆ ಗರ್ಭಿಣಿಯನ್ನು ಆಸ್ಪತ್ರೆಗೆ ಸೇರಿಸಬೇಕಾಯಿತು. ಆಸ್ಪತ್ರೆಗೆ ಸೇರಿಸಿದ ಮೇಲೆ ಮಗುವು ಜನನವಾಗುವುದಕ್ಕೆ ಸ್ವಲ್ಪ ಕಷ್ಟವಾಯಿತು. ಆಪರೇಷನ್ ಮಾಡಿ ಮಗುವನ್ನು ಗರ್ಭಕೋಶದಿಂದ ತೆಗೆಯಲಾಯಿತು ? ಮಗುವೇನೋ ಚೆನ್ನಾಗಿಯೇ ಇತ್ತು. ತಂದೆತಾಯಿಗಳಿಗೆನೋ ಸಂತೋಷವಾಯಿತು ಆದರೆ ಆ ಮಗುವಿನ ಬಲಗೈಯ್ಯನ್ನು ಬಿಚ್ಚಿರಲೇ ಇಲ್ಲ ಇದನ್ನು ನೋಡಿ ಆ ಕೈಯ್ಯನ್ನು ತೆಗೆದು ನೋಡಿದ ಮೇಲೆ ಅದರಲ್ಲಿ ಒಂದು ಉಂಗುರವಿತ್ತು. ಆ ರೀತಿ ಇದನ್ನು ನೋಡಿದರೆ ಇದು ಹಿಂದಿನ ಸಂಸ್ಕಾರ ಹಿಂದಿನ ಸಂತತಿಯಿಂದಲೂ ಬೆಳೆದುಕೊಂಡು ಬಂದಿದೆ. ಅದಕ್ಕೆ ತಮಗೆ ನಾನು ಹೇಳುವುದು ಇಷ್ಟೆ. ದಯಮಾಡಿ ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಬಹಳ ಜನ ದುಡ್ಡು ತಿಂದಿದ್ದಾರೆ, ಅವರ ಬಗ್ಗೆ ಕಠಿಣವಾದ ಸಜವನ್ನು ಕೊಡಬೇಕು. ಕೆಲವರನ್ನಾದರೂ ಮೀಸಾ ಕಾನೂನಿನ ಪ್ರಕಾರ ಜೈಲಿಗೆ ಕಳುಹಿಸಿ. ಇದರಿಂದ ದೇಶಕ್ಕೆ ಸರ್ಕಾರಕ್ಕೆ ಮತ್ತು ಮಂತ್ರಿಗಳಿಗೆ ಒಳ್ಳೆಯದಾಗುತ್ತದೆ. ಮಾನ್ಯ ರಂಗನಾಥ್‌ರವರಿಗೂ ಒಳ್ಳೆಯ ಹೆಸರು ಬರುತ್ತದೆಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್)—ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಹಕಾರ ಸಚಿವರು ಈ ಸಭೆಯ ಒಪ್ಪಿಗೆಗಾಗಿ ನಮ್ಮ ಮುಂದೆ ಸಹಕಾರ ಸಂಘಗಳ ಕಾಯಿದೆಗೆ ಒಂದು ತಿದ್ದುಪಡಿಯನ್ನು ಇಟ್ಟಿದ್ದಾರೆ. ಇದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ನಾನು ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಸಹಕಾರ ಇಲಾಖೆಯ ಬೇಡಿಕೆಗಳ ಮೇಲೆ ಮಾತನಾಡುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಮಾಡಿದ್ದರು. ಅದು ಬಹಳ ಮುಖ್ಯವಾದವುಗಳು ಸಹಕಾರಿ ಸಂಘದಲ್ಲಿ ಎಂತಹವರು ಇದ್ದಾರೆ ಯಾವ ಜನ ಇದ್ದಾರೆ ಯಾರ ವಶದಲ್ಲಿ ಸಹಕಾರ ಸಂಘಗಳು ಇದ್ದಾವೆ ಎನ್ನುವುದು ಒಂದು ಅಂಶ. ಅದನ್ನು ನೋಡಿದಾಗ ಮತ್ತು ಈ ಬಿಲ್ಲನ್ನು ನೋಡಿದಾಗ ಸಂತೋಷವಾಯಿತು. ಕೆಲವು ವಿಷಯಗಳಲ್ಲಾದರೂ ಒಳ್ಳೆಯ ತಿದ್ದುಪಡಿ ಕಾನೂನನ್ನು ಮಾಡಿದ್ದಾರೆ. ಸಹಕಾರ ಸಂಘಗಳ ಆಡಳಿತದಲ್ಲಿ ಹಿಂದೆ ಇದ್ದಂತ ಪಟ್ಟಭದ್ರಹಿತಗಳು ಯಾರೇ ಇರಲಿ ಎಲ್ಲೇ ಇರಲಿ ಅವರ ಶಕ್ತಿಗನುಸಾರವಾಗಿ ಸ್ಥಾನಮಾನಗಳನ್ನು ಪಡೆದುಕೊಂಡಿದ್ದರು. ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಬಲಯುತರಾಗಿದ್ದ ಅಂತಹ ಶಕ್ತಿಗಳ ವಶದಲ್ಲಿ ಈ ಸಹಕಾರ ಸಂಘಗಳು ಇದ್ದವು. ನಮ್ಮ ಮಾನ್ಯ ಲಿಂಗಪ್ಪನವರ ಧಾಟಿಯಲ್ಲಿ ಹೇಳುವುದಾದರೆ ಚರ್ಮದ ಚೀಲಗಳಲ್ಲಿ

ಇದ್ದವು. ಅದನ್ನು ಇವತ್ತಿನದಿವಸ ತಪ್ಪಿಸಿ ಎಲ್ಲೆಲ್ಲಿ ಕುಂಠಿತಗೊಂಡು ಇದ್ದವೋ ಅವುಗಳನ್ನು ಸರಿಯಾಗಿ ನಡೆಸುವುದಕ್ಕೆ ಯೋಗ್ಯರೀತಿಯಲ್ಲಿ ಮಾನ್ಯಮಂತ್ರಿಗಳು ಏರ್ಪಾಡು ಮಾಡಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳು ಅಭಿನಂದನಾರ್ಹರು. ಆದರೆ ಇನ್ನು ಕೆಲವು ವಿಷಯಗಳಲ್ಲಿ ನೋಡುವುದಾದರೆ ಅವರ ಉದ್ದೇಶ ವೇನೋ ಒಳ್ಳೆಯದು. ಆ ಉದ್ದಿಶ್ಯಕ್ಕೆ ತದ್ವಿರುದ್ಧವಾಗಿ ಕೆಲಸಗಳನ್ನು ಮಾಡುವುದಕ್ಕೆ ಕೆಲವರು ಹೊರಟಿ ದ್ದಾರೆ. ಅದರ ಬಗ್ಗೆ ಅನೇಕ ನಿದರ್ಶನಗಳು ಇವೆ. ಅವನ್ನು ಬೇಕಾದರೆ ಹೇಳುವುದಕ್ಕೆ ತಯಾರಿದ್ದೇನೆ. ಹಳ್ಳಿ ಮಟ್ಟದಲ್ಲಿ ಇರತಕ್ಕಂಥ ಸೊಸೈಟಿಗಳನ್ನು ಅಮಾಲ್ಗಮೇಟ್ ಮಾಡುವುದಕ್ಕೆ ಹೊರಟಿದ್ದಾರೆ. ಜಿಲ್ಲಾ ಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಆಗಿರತಕ್ಕಂಥ ಅನ್ಯಾಯ ದರೋಡೆಗಳ ಬಗ್ಗೆ ಮಾನ್ಯ ಸಚಿವರು ಅವುಗಳ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಜಿಲ್ಲಾ ಮಟ್ಟದಲ್ಲಿ ಅನೇಕ ಕಡೆ ಕೋಟಿಗಟ್ಟಲೆ ಹಣ ದುರುಪಯೋಗವಾಗಿದೆ. ಇದರಲ್ಲಿ ಬಹುಜನರು ಅವರ ಪಕ್ಷದಲ್ಲಿ ಮತ್ತು ಕಾಂಗ್ರೆಸಿನಲ್ಲಿ ಇದ್ದಾರೆ. ಇಂತಹವರ ಮೇಲೆ ಮಾನ್ಯ ಮಂತ್ರಿಗಳು ಏತಕ್ಕೆ ಕನಿಕರ, ಮಮತೆ ಇಟ್ಟಿದ್ದಾರೋ ಗೊತ್ತಾಗಲಿಲ್ಲ. ಇದನ್ನು ನೋಡಿದರೆ ಈ ಬಿಲ್ಲಿನಲ್ಲಿ ಇರುವುದನ್ನು ನೋಡಿದರೆ ಅಭಾಸವಾಗುತ್ತದೆ. ಅಂತಹವರ ಮೇಲೆ ಯೋಗ್ಯ ಕ್ರಮ ತೆಗೆದುಕೊಂಡಿಲ್ಲ. ಇನ್ನು ಡಿ. ಸಿ ಸಿ. ಬ್ಯಾಂಕುಗಳಲ್ಲಿ ಹಣದ ದುರುಪಯೋಗ ಮತ್ತು ಸಾಲದ ವಿತರಣೆಯನ್ನು ನೋಡಿದರೆ ಯಾರೋ ಬೇನಾಮಿಗಳು ಹೆಸರು ಕುಲವಿರುವುದಿಲ್ಲ ಅವರಿಗೆ ಸಾಲ ಹಂಚಿಕೆ ಯಾಗಿರುತ್ತದೆ. ಅಂತಹವರ ಮೇಲೆ ಯೋಗ್ಯ ಕ್ರಮ ತೆಗೆದುಕೊಂಡಿಲ್ಲ. ನಮ್ಮ ರಾಜ್ಯದಲ್ಲಿ ಕೆಲವು ಜನತಾ ಬಜಾರ್‌ಗಳು ಚೆನ್ನಾಗಿ ಕೆಲಸಮಾಡುತ್ತಿವೆಯೆಂದು ಕೇಳಿದ್ದೇವೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಕೆ.ಜಿ ಎಫ್ ನಲ್ಲಿ ಕನ್ಸ್ಯೂಮರ್ಸ್ ಸ್ಟೋರ್ಸ್ ನನಗೆ ಗೊತ್ತಿದ್ದಹಾಗೆ ಅವರಲ್ಲಿ ಮೂರು ವರೆ ಲಕ್ಷರೂಪಾಯಿ ಹಣ ಮಂಗಮಾಯವಾಗಿದೆ ಎಂದು ಕೇಳಿದ್ದೇನೆ. ಇದು ಯಾವ ರೀತಿಯಾಗಿದೆ ಎಂದು ಅರ್ಥವಾಗುವುದಿಲ್ಲ. ಹಣ ದುರುಪಯೋಗವಾಗಿ ೭-೮ ವರ್ಷಗಳ ಮೇಲೆ ಆಗಿದೆ ಇವರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿಲ್ಲ. ಮಾನ್ಯಮಂತ್ರಿಗಳು ಏತಕ್ಕೋಸ್ಕರ ಎಂದು ದಯಮಾಡಿ ತಿಳಿಸಿದರೆ ನಮಗೆ ಸಂತೋಷ. ಜಿಲ್ಲಾಮಟ್ಟದಲ್ಲಿ ತಾಲ್ಲೋಕು ಮಟ್ಟದಲ್ಲಿ ಸಕ್ಕರೆ ಕಂಟ್ರೋಲ್ ತೆಗೆದಮೇಲೆ, ಕಂಟ್ರೋಲ್ ಐಟಮ್ಸ್ ಜಿಲ್ಲಾಮಟ್ಟದಲ್ಲಿ ಹಳ್ಳಿಗಳ ಮಟ್ಟದಲ್ಲಿ ಎಲ್ಲೆಲ್ಲಿ ಸಹಕಾರ ಸಂಘಗಳ ಮಟ್ಟದಲ್ಲಿ ಬರುತ್ತದೋ ಅದು ಸಾಮಾನ್ಯ ಜನರಿಗೆ ಸಿಗುವುದಿಲ್ಲ. ಎಲ್ಲಾ ಮಂಗಮಾಯವಾಗುತ್ತದೆ. ಅದಕ್ಕೆ ಬೇಕಾದರೆ ಸಾಕಷ್ಟು ನಿದರ್ಶನಗಳು ಇವೆ. ಸುಮಾರು ಕೋಟಿಗಟ್ಟಲೆ ರೂಪಾಯಿ ಜನಗಳಿಗೆ ಸಾಲ ಒದಗಿಸಬೇಕೆಂದು ಇದೆ. ಇದೇ ರೀತಿಯಲ್ಲಿ ಕನ್ಸ್ಯೂಮರ್ಸ್ ಮೂವ್‌ಮೆಂಟ್ ಕನ್ಸ್ಯೂಮರ್ಸ್ ಸೊಸೈಟಿ ಗಳು ಪರಿಣಾಮಕಾರಿಯಾಗಿ ಕೆಲಸಮಾಡದೆ ಹೋದರೆ ಅದರಿಂದ ಯಾವರೀತಿ ಪ್ರಯೋಜನವೂ ಜನತೆಗೆ ಸಿಗುವುದಿಲ್ಲ. ಇನ್ನು ಬೆಂಗಳೂರು ಜನತಾ ಬಜಾರ್ ಮತ್ತು ಹುಬ್ಬಳ್ಳಿ-ಧಾರವಾಡ್ ಜನತಾ ಬಜಾರ್‌ಗಳು ಚೆನ್ನಾಗಿ ನಡೆಯುತ್ತಿವೆಯೆಂದು ಕೇಳಿದ್ದೇನೆ. ತಾಲ್ಲೋಕು ಮಟ್ಟದಲ್ಲಿ ಮಾತ್ರ ಕನ್ಸ್ಯೂಮರ್ಸ್ ಸೊಸೈಟಿ ಗಳು ಸಂಪೂರ್ಣವಾಗಿ ನಿಷ್ಫಲತೆ ಹೊಂದಿವೆ. ಯೋಗ್ಯ ರೀತಿಯಲ್ಲಿ ನಡೆಯುತ್ತಿಲ್ಲ. ಯಾರು ಸಮಾಜದಲ್ಲಿ ದುರ್ಬಲ ವರ್ಗದವರು ಇದ್ದಾರೆ ಅವರಿಗೆ ಇದರಿಂದ ಏನೂ ಪ್ರಯೋಜನ ಆಗುತ್ತಿಲ್ಲ. ಇಂತಹ ಕನ್ಸ್ಯೂ ಮರ್ಸ್ ಸ್ಟೋರ್ಸ್‌ಗಳ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ವಿವರವಾಗಿ ತಿಳಿಸಬೇಕು. ಇನ್ನು ಸೆಕ್ಷನ್ ೧೪ (ಬಿ) ಬಹಳ ಮುಖ್ಯವಾಗಿ ತಿದ್ದುಪಡಿ ನಾನು ಕೂಡಾ ಒಪ್ಪುತ್ತೇನೆ. ಮಾನ್ಯ ಲಿಂಗಪ್ಪ ನವರು ಬಹಳ ಸೂಕ್ಷ್ಮವಾಗಿ ಪ್ರಸ್ತಾಪಮಾಡಿದರು. ಈ ತಿದ್ದುಪಡಿಯ ಪ್ರಕಾರ ಮೊದಲನೇ ಬೋರ್ಡ್ ಆಫ್ ಡೈರೆಕ್ಟರ್ಸ್ ಮತ್ತು ಅದರ ಅಧ್ಯಕ್ಷರನ್ನು ಮತ್ತು ಮ್ಯಾನೇಜಿಂಗ್ ಡೈರೆಕ್ಟರನ್ನು ನಾಮಕರಣ ಮಾಡುವ ಅವಕಾಶವನ್ನು ಆ ಸೆಕ್ಷನ್ ೧೪ (ಎ) ನಲ್ಲಿ ತಂದಿದ್ದಾರೆ ಇದು ನನಗೆ ಅರ್ಥವಾಗುತ್ತಾ ಇಲ್ಲ. ಸರ್ಕಾರಕ್ಕೆ ನಾಮಕರಣ ಮಾಡುವ ಹಕ್ಕು ಇಲ್ಲ. ಸರ್ಕಾರ ಒಂದು ಮಾತನ್ನು ಹೇಳಬಹುದು ಇದನ್ನು ಕೂಲಂಕುಷವಾಗಿ ಪರಿಶೀಲಿಸಬೇಕು. ಈಗ ನಾಮಕರಣದ ಹಕ್ಕನ್ನು ಏನು ಪಡೆದಿದ್ದಾರೆ. ಆದರೆ ಈ ಅಮಾಲ್ಗಮೇಷನ್ ಪ್ರೋಸೆಸ್ ಪ್ರಾರಂಭವಾದಾಗಿನಿಂದ......

ಶ್ರೀ ಕೆ ಎಚ್. ರಂಗನಾಥ್.—ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ್ ಆಗುವುದಾದರೆ ಒಂದು ಮಾತು ಹೇಳುತ್ತೇನೆ. ಈಗಲೂ ಕೂಡ ಹೊಸ ಸಹಕಾರ ಸಂಘಗಳು ರಿಜಿಸ್ಟರ್ ಆದಕೂಡಲೇ ಚೀಫ್ ಪ್ರಮೋಟರ್‌ಗಳು ಅದರಲ್ಲಿ ನಾಮಕರಣವಾಗಿರುತ್ತಾರೆ. The first Board which is going to form is a Nominated Board. It will be there for a certain period. Now the re-organised co-operative societies are the new co-operative societies. Therefore, the first Board will be the nominated Board.

ಶ್ರೀ ಸಿ. ಬೈರೇಗೌಡ.—ಸಿ ವರ್ಷಗಳವರೆಗೆ ತಮ್ಮ ಪ್ರತಿನಿಧಿಗಳು ಅಲ್ಲಿರುತ್ತಾರೆ......

ಶ್ರೀ ಕೆ ಎಚ್. ರಂಗನಾಥ್.—ಈಗ ಹೊಸದಾಗಿ ಒಂದು ಸೊಸೈಟಿಯಾದಾಗ ಯಾವ ಚೀಫ್ ಪ್ರಮೋಟರ್‌ಗಳು ಇರುತ್ತಾರೋ ಅವರೇ ಅಲ್ಲಿರುತ್ತಾರೆ, ಅದೇ ಪ್ರಭೃತಿಗಳು ಅಲ್ಲಿರುತ್ತಾರೆ. ನಮ್ಮ ಪ್ರಭೃತಿಗಳೇ ಅಲ್ಲಿರಬೇಕೆಂದು ಏನೂ ಇಲ್ಲ.

ಶ್ರೀ ಸಿ. ಬೈರೇಗೌಡ.—ಅವು ಹೊಸ ಸಹಕಾರ ಸಂಘಗಳೆಂದು ನಾವು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ.

ಶ್ರೀ ಕೆ ಎಚ್ ರಂಗನಾಥ್.—ಕಾನೂನಿನ ಪ್ರಕಾರ ಮಾತನಾಡುವಾಗ, ಹೊಸ ಸೊಸೈಟಿಗಳು, ಹಳೆಯ ಸೊಸೈಟಿಗಳು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. It is a common seal. It functions as a corporate body. When it is reorganised, it loses its corporate body. ಅದರ ಐಡೆಂಟಿಟಿ ಹೊರಟು ಹೋಗುತ್ತದೆ. A new corporate comes into existence ನಾವು ಅದನ್ನು ಹೊಸ ಸಂಸ್ಥೆ ಎಂದು ಪರಿಗಣಿಸಬೇಕಾಗುತ್ತದೆ

ಶ್ರೀ ಸಿ. ಬೈರೇಗೌಡ.—ರೀ ಆರ್ಗನೈಜ್ಡ್ ಎಂದು ಕರೆಯುತ್ತೀರೇ ಹೊರತು, ಹೊಸ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡುತ್ತಿದ್ದೇವೆಂದು ಈ ಬಿಲ್ಲಿನಲ್ಲಿ ಕೂಡ ಹೇಳಿಲ್ಲ ಹೊಸದಾಗಿ ಸ್ಥಾಪನೆ ಆಗಿರ ತಕ್ಕಂಥ ಸಹಕಾರ ಸಂಘಗಳನ್ನು ಮಾನ್ಯ ಮಂತ್ರಿಗಳವರು ಒಪ್ಪಿದರೂ ಕೂಡ......

SRI K. H. RANGANATH.—Section 14 (a) is abundantly clear. It is a new amalgamated or re-organised society. It is not the old society, with old seal and all that.

ಶ್ರೀ ಸಿ. ಬೈರೇಗೌಡ.—ಹೊಸ ಸಹಕಾರ ಸಂಘಗಳು ಆಗಿದ್ದರೂ ಕೂಡ ಪ್ರಜಾಪ್ರಭುತ್ವದಲ್ಲಿ ನಿಮಗೆ ನಂಬಿಕೆ ಇದ್ದಿದ್ದೇ ಆದರೆ ಚುನಾವಣೆಯ ಮೂಲಕ ಚುನಾಯಿಸಿ ಬರುವುದಕ್ಕೆ ತಾವು ಅವಕಾಶ ಮಾಡಿಕೊಡಬಹುದಾಗಿತ್ತು. ನಿಮ್ಮ ಬೈಲಾದಲ್ಲೂ ಕೂಡ ಸಣ್ಣ ರೈತರು ಎಷ್ಟು ಜನರಿರಬೇಕು ದೊಡ್ಡ ರೈತರು ಎಷ್ಟು ಜನರಿರಬೇಕು ಎಂದು ಇದೆ ಅದನ್ನು ನಾನು ಖಂಡಿತವಾಗಿ ಸ್ವಾಗತ ಮಾಡುತ್ತೇನೆ. ದೊಡ್ಡ ದೊಡ್ಡ ಭೂಮಾಲೀಕರು ಆರ್ಥಿಕವಾಗಿ, ಸಾಮಾಜಿಕವಾಗಿ, ಮತ್ತು ರಾಜಕೀಯವಾಗಿ ಶಕ್ತಿ ಇರತಕ್ಕಂಥವರ ಕೈಯಲ್ಲಿ ಏನು ಸಹಕಾರ ಸಂಘಗಳು ಇವೆ ಅದನ್ನು ಕಿತ್ತು ಹಾಕಿ ಸಮಾಜದಲ್ಲಿ ದುರ್ಬಲರಾಗಿರತಕ್ಕಂಥವರ ಕೈಗೆ ಸಹಕಾರ ಸಂಘಗಳು ಬರಬೇಕೆಂದು ನಾನು ಹಿಂದೆಯೇ ನನ್ನ ಬಜೆಟ್ ಭಾಷಣದಲ್ಲಿ ಹೇಳಿದ್ದೇನೆ ತಾವು ನನ್ನ ಬಜೆಟ್ ಭಾಷಣವನ್ನು ತೆಗೆದು ನೋಡಿದರೆ ನಾನು ಹೇಳಿರುವುದು ಗೊತ್ತಾಗುತ್ತದೆ ಆಗ ಮಾನ್ಯ ಮಂತ್ರಿಗಳವರು ಏನೇನೋ ಮಾತನಾಡುತ್ತಿದ್ದಾರೆಂದು ನನಗೆ ಹೇಳಿದ್ದರು. ಇದರ ಬಗ್ಗೆ ತಾವು ರಿಕಾರ್ಡ್ ತೆಗೆಸಿ ನೋಡಿದರೆ ಗೊತ್ತಾಗುತ್ತದೆ. ಇವತ್ತು ಸಹಕಾರ ಸಂಘಗಳಿಗೆ ನಾಮಿನೇಟ್ ಮಾಡುವುದಕ್ಕೆ ಬದಲು ಚುನಾವಣೆಯ ಮೂಲಕ ಸಹಕಾರ ಸಂಘಗಳಿಗೆ ಆರಿಸುವುದಕ್ಕೆ ಸಾಧ್ಯತೆ ಇತ್ತು. ತಾವು ಈ ತರಹದ ಅಮೆಂಡ್‌ಮೆಂಟ್ ತರುವುದಕ್ಕೆ ಬದಲು ಸಹಕಾರ ಸಂಘಗಳಿಗೆ ಕೇವಲ ೧೫ ದಿವಸಗಳಲ್ಲಿಯೇ ಚುನಾವಣೆ ನಡೆಯಿಸಬಹುದಾಗಿತ್ತು. ಎಲೆಕ್ಷನ್ ನಡೆಸಲು ೧೫ ದಿವಸದ ನೋಟೀಸ್ ಕೊಡಬಹುದು ಎಂದು ಬೈಲಾದಲ್ಲಿ, ಸೊಸೈಟೀಸ್ ಆ್ಯಕ್ಟಿನಲ್ಲಿಯೂ ಇದೆ. ಅದನ್ನು ಬಿಟ್ಟು ತಾವು ಇವತ್ತಿನ ದಿವಸ ನಾಮಿನೇಟ್ ಮಾಡುವುದಕ್ಕೆ ಹೊರಟಿದ್ದೀರಿ. ಅಲ್ಲಿ ಯಾರನ್ನು, ಎಂಥವರನ್ನು ನಾಮಿನೇಟ್ ಮಾಡಿದ್ದಾರೆಂದರೆ, ಯೂತ್ ಕಾಂಗ್ರೆಸ್‌ನವರನ್ನು, ಅದು ಎಂಥಾದ್ದೋ ಮಂಡಲ ಕಾಂಗ್ರೆಸ್ ಮತ್ತೆ ತಾಲ್ಲೂಕ್ ಕಾಂಗ್ರೆಸ್ ಮತ್ತೆ ಜಿಲ್ಲಾ ಕಾಂಗ್ರೆಸ್ ಮತ್ತೆ ಸರ್ಕಾರದ ಕಾಂಗ್ರೆಸ್, ಸರ್ಕಾರಕ್ಕೆ ಬೆಂಬಲವಿರತಕ್ಕಂಥ ಕಾಂಗ್ರೆಸ್, ಮತ್ತೆ ಶ್ರೀ ಕೆ. ಎಚ್. ಪಾಟೀಲರ ಒಂದು ಕಾಂಗ್ರೆಸ್ ಎಂದು ಇದೆ, ಅದನ್ನೆಲ್ಲಾ ನಾನು ಇಲ್ಲಿ ಹೇಳಲೇ ಬೇಕಾಗುತ್ತದೆ. ಅವರುಗಳನ್ನೆಲ್ಲಾ ನಾಮಿನೇಟ್ ಮಾಡಿದ್ದಾರೆ

MR. DEPUTY SPEAKER.—The hon'ble Member is deviating from the scope of this Amendment Bill, I tolerated to a certain extent with the hope that he will come to the point. If he wants to go like this, I will have to curb the speech of the hon. Member.

ಶ್ರೀ ಸಿ. ಬೈರೇಗೌಡ.—ನಾಮಿನೇಷನ್ ಯಾವ ರೀತಿ ನಡೆದಿದೆ ಎನ್ನುವುದರ ಬಗ್ಗೆ ಆಧಾರ ಸಹಿತವಾಗಿ ಹೇಳುವುದಕ್ಕೆ ತಯಾರಾಗಿದ್ದೇನೆ. ಅದರ ಒಂದು ಪಟ್ಟಿ ಕೂಡ ನನ್ನ ಹತ್ತಿರವಿದೆ.

ಉಪಾಧ್ಯಕ್ಷರು.—ಅಂಥವರು ಯಾರು ಯಾರು ಇದ್ದಾರೆ ಎಂಬುವ ಪಟ್ಟಿ ಇದ್ದರೆ ಮಾನ್ಯ ಮಂತ್ರಿಗಳವರಿಗೆ ಕಳುಹಿಸಿ ಕೊಡಬಹುದು.

ಶ್ರೀ ಕೆ. ಎಚ್. ರಂಗನಾಥ್.—ಅಧ್ಯಕ್ಷರೇ, ಮಾನ್ಯ ಸದಸ್ಯರು ಒಂದು ಪಟ್ಟಿಯನ್ನು ಈಗಾಗಲೇ ನನ್ನ ಹತ್ತಿರಕ್ಕೆ ಕೊಟ್ಟಿದ್ದಾರೆ. ಅವರು ಕೊಟ್ಟಿರುವ ಪಟ್ಟಿಯಲ್ಲಿರುವವನನ್ನು ನಾವು ಕೈ ಬಿಟ್ಟಿಲ್ಲ. ಇನ್ನು ಅಲ್ಲಿ ಯಾರನ್ನೂ ನಾಮಿನೇಟ್ ಮಾಡಿಲ್ಲ. ಅವರು ಸುಮ್ಮನೇ ಕಾಂಗ್ರೆಸ್ಸಿನ ಮೇಲೆ ಆಪಾದನೆಯನ್ನು ಮಾಡುತ್ತಿದ್ದಾರೆ. ಅವರು ಯಾವ ಪಾರ್ಟಿ ಎಂಬುದನ್ನು ಮೊದಲು ಹೇಳಲಿ.

ಶ್ರೀ ಸಿ. ಬೈರೇಗೌಡ.—ಮಾನ್ಯ ಶ್ರೀ ಕೆ. ಎಚ್. ರಂಗನಾಥ್‌ರವರಿಗೆ ನಾನು ಯಾವ ಪಾರ್ಟಿಯವನೆಂದು ಹೇಳುವ ಅವಶ್ಯಕತೆ ಇಲ್ಲ. ಅದೂ ಮಾನ್ಯ ರಂಗನಾಥ್‌ರವರಿಗೆ ನಾನು ಯಾವ ಪಾರ್ಟಿಯವನೆಂದು ಹೇಳುವುದು ಅನಾವಶ್ಯಕ. ಇವತ್ತು ತಾವು ಏನು ನಾಮಿನೇಷನ್ ಮಾಡುವಾಗ ಈ ಬಿಲ್ಲಿನಲ್ಲಿ ತಂದಿರ ತಕ್ಕಂಥ ಉದ್ದೇಶಕ್ಕೆ, ಘನತೆ ತರುವ ರೀತಿಯಲ್ಲಿ ಮಾಡಿಲ್ಲ. ಅದರಲ್ಲಿ ಅನೇಕ ಲೋಪದೋಷಗಳು ಇವೆ. ಇವತ್ತು ನಮ್ಮ ತಾಲ್ಲೂಕಿನ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ ನಾನು ನಮ್ಮ ಜಿಲ್ಲಾ ಕೇಂದ್ರ ಬ್ಯಾಂಕಿನ ಡೈರೆಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ಅಂದರೆ ನಾನು ಒಬ್ಬ ಸಹಕಾರ ಸಂಘಗಳಲ್ಲಿಯ ಕೆಲಸ ಕಾರ್ಯಗಳಲ್ಲಿ ಆಸ್ಥೆ ವಹಿಸಿರತಕ್ಕಂಥವನಾದುದರಿಂದ ಜಿಲ್ಲಾ ಕೇಂದ್ರ ಬ್ಯಾಂಕಿನ ಒಬ್ಬ ಡೈರೆಕ್ಟರ್ ಆಗಿ ಮತ್ತು ನನ್ನ ಕ್ಷೇತ್ರದ ಒಬ್ಬ ಶಾಸಕನಾಗಿ ನಾನು ಇವತ್ತಿನ ದಿವಸ ನಮ್ಮ ಜನರ ಮನ್ನಣೆ ಪಡೆದು ಕೆಲಸ ಮಾಡುತ್ತಿದ್ದೇನೆ. ಒಂದು ಸಾರಿ ಮಾನ್ಯ ಮಂತ್ರಿಗಳವರು ನಮ್ಮ ಊರಿಗೆ ಭೇಟಿ ಮಾಡಿದ್ದಾಗ ನಾನು ಅವರ ಕೈಗೆ ಒಂದು ಪಟ್ಟಿಯನ್ನು ಕೊಟ್ಟಿದ್ದೆ. ತಾವು ಆ ಬೋರ್ಡಿನಲ್ಲಿ ನಾಮಿನೇಟ್ ಮಾಡುವುದಾದರೆ ಮಾತ್ರ ಪಟ್ಟಿಯನ್ನು ಕೊಡುತ್ತೇನೆ ಇಲ್ಲದಿದ್ದರೆ ಕೊಡುವುದಿಲ್ಲ ಎನ್ನುವ ಅಂಶವನ್ನು ತಿಳಿಸೀ ಕೊಟ್ಟಿದ್ದೆ. ಅದು ಈಗ ಮಾನ್ಯ ಮಂತ್ರಿಗಳವರ ಹತ್ತಿರವಿದೆಯೋ ಇಲ್ಲವೋ ಗೊತ್ತಾಗಲಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ತಾವು ಕೊಟ್ಟಿರುವ ಸೊಸೈಟಿಗೆ ಇನ್ನು ಯಾರನ್ನೂ ನಾಮಿನೇಟ್ ಮಾಡಿಲ್ಲ.

ಶ್ರೀ ಸಿ. ಬೈರೇಗೌಡ.—ಈಗಾಗಲೇ ಸುಮಾರು ೧೨ ಸೊಸೈಟಿಗಳಲ್ಲಿ ೧೦ ಸೊಸೈಟಿಗೆ ನಾಮಿನೇಷನ್ ಮಾಡಿದ್ದೀರಿ. ನಾನು ಕೊಟ್ಟಿರುವ ಪಟ್ಟಿಯನ್ನು ನೀವು ಎಲ್ಲಿಯೋ ಕೈ ಬಿಟ್ಟಿದ್ದೀರಿ ಎನ್ನುವ ಅನುಮಾನ ನಮಗೆ ಉಂಟಾಗಿದೆ. ಮಾನ್ಯ ಅಧ್ಯಕ್ಷರೇ, ನಾನು ಮಂತ್ರಿಗಳವರ ಕೈಗೆ ಇಂಥಿಂಥ ಸಹಕಾರ ಸಂಘಗಳಲ್ಲಿ ಇಂಥಿಂಥವರು ಡಿಫಾಲ್ಟರ್ ಇದ್ದಾರೆ ಎಂತಲೂ ಇಂಥಿಂಥ ದೊಡ್ಡ ರೈತರು ಇದ್ದಾರೆ ಎಂಬುದನ್ನೆಲ್ಲಾ ಹೇಳಿ ಕೊಟ್ಟಿದ್ದೇನೆ. ಡಿಫಾಲ್ಟರ್ ಆಗಿರತಕ್ಕಂಥವರನ್ನೇ ತಾವು ಇವತ್ತಿನ ದಿವಸ ಆ ಸೊಸೈಟಿಗಳಿಗೆ ಚೇರ್ಮನ್ ಆಗಿ ನಾಮಕರಣ ಮಾಡಿದ್ದೀರಿ. ತಾವು ಆ ಚೇರ್ಮನ್‌ಗಳ ಕ್ಯಾರಿಯರ್ ಹೇಗಿದೆ ಎಂಬುದನ್ನು ತರಿಸಿ ನೋಡಿದರೆ ತಮಗೇ ಗೊತ್ತಾಗುತ್ತದೆ. ತಮ್ಮ ಧ್ಯೇಯ ಧೋರಣೆಯನ್ನು ನಮ್ಮ ಉದ್ದೇಶವನ್ನು ಕಾರ್ಯಗತ ಮಾಡುತ್ತಾರೆ ಎನ್ನುವ ಖಾತರಿ ತಮಗೆ ಆದರೆ ಖಂಡಿತವಾಗಿಯೂ ಅವರನ್ನೇ ನೇಮಕ ಮಾಡಿ ಎಂದು ಹೇಳುತ್ತೇನೆ ಅಲ್ಲಿ ಸುಮಾರು ಮೂರು ಸಹಕಾರ ಸಂಘಗಳು ಡಿಫಾಲ್ಟರ್ ಆಗಿವೆ. ಅಲ್ಲದೆ, ಅಲ್ಲಿ ಒಬ್ಬರು ದೊಡ್ಡ ರೈತರಿದ್ದಾರೆ. ಅವರನ್ನು ಅಲ್ಲಿಗೆ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಆದರೆ, ಸರ್ಕಾರದ ಉದ್ದೇಶ: ಪ್ರಬಲವಾದ ಶಕ್ತಿಗಳ ಮತ್ತು ದೊಡ್ಡದೊಡ್ಡ ರೈತರ ಹಿತಾಸಕ್ತಿಗಳನ್ನು ಕಾಪಾಡುವ ಬದಲಿಗೆ ಸಾಮಾನ್ಯ ಜನರ, ಹಿಂದುಳಿದ ಜನರ ಹಿತಾಸಕ್ತಿಗಳನ್ನು ಕಾಪಾಡುವುದಾಗಿದೆ. ಹೀಗಿರುವಾಗ, ದೊಡ್ಡ ದೊಡ್ಡ ರೈತರನ್ನೇ ಪುನಃ ಅಲ್ಲಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡುವುದರಿಂದ ಅದರಿಂದ ಸರ್ಕಾರದವರೇನು ಸಾಧಿಸಿದಂತಾಗುತ್ತದೆ? ಆದುದರಿಂದ, ಇದನ್ನು ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡಬೇಕಾದುದು ಯೋಗ್ಯ ಎಂದು ನಾನು ಹೇಳಬಯಸುತ್ತೇನೆ. ಬಹುಶಃ ಸರ್ಕಾರದವರು ನೇಮಕ ಮಾಡಿರುವ ಆ ದೊಡ್ಡ ರೈತರು, ಸಣ್ಣ ರೈತರೆಂದು ಯಾರು ವರದಿಯನ್ನು ಕೊಟ್ಟಿದ್ದಾರೆ; ಹಾಗೇನಾದರೂ ಕೊಟ್ಟಿದ್ದರೆ, ಅವರು ಯಾವ ಆಧಾರದ ಮೇಲೆ ಕೊಟ್ಟಿದ್ದಾರೆ, ಮತ್ತು ಹಾಗೆ ವರದಿ ಕೊಟ್ಟವರ ಹೆಸರುಗಳನ್ನು ಪತ್ತೆಹಚ್ಚಿ, ವಿಚಾರ ಮಾಡಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಸಹಕಾರ ಸಂಘಗಳ ಪುನರ್ ಸಂಘಟನೆ ವಿಚಾರವಾಗಿ ಹೇಳುವುದಾದರೆ, ಸಣ್ಣ ಪುಟ್ಟ ಸಹಕಾರ ಸಂಘಗಳನ್ನು ಸೇರಿಸಿ, ಒಂದು ದೊಡ್ಡ ಸಹಕಾರ ಸಂಘವನ್ನಾಗಿ ಮಾಡುವುದು ಮತ್ತು ಅದನ್ನೇ ಪರಿಣಾಮಕಾರಿಯಾಗಿ ಕಾರ್ಯ ನಡೆಸುವಂತೆ ವ್ಯವಸ್ಥೆ ಮಾಡುವುದು ಬಹಳ ಯೋಗ್ಯವಾದ ಕೆಲಸ. ಹೀಗೆ ಮಾಡುವ ವಿಚಾರ ಬಂದಾಗ, ನಾನು ಮಾನ್ಯ ಸಹಕಾರ ಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ನಮ್ಮ ಪ್ರದೇಶದಲ್ಲಿ ಈ ರೀತಿ ಎರಡು ಸಹಕಾರ ಸಂಘಗಳನ್ನು ಮಾಡುವುದಕ್ಕೆ ಅವಕಾಶವಿದೆ. ಪ್ರಜಾಸಂಖ್ಯೆಯಲ್ಲಿ ೧೦೦-೨೦೦ ವ್ಯತ್ಯಾಸವಾಗಬಹುದು; ಆದರೆ ಹೆಚ್ಚೇನಿಲ್ಲ. ಅವೆರಡೂ ಪೋಟೆಷಿಯಲ್ ವಯಬಲ್ ಆಗಿವೆ. ಆದುದರಿಂದ, ಅಲ್ಲಿ ಎರಡು ಸಹಕಾರ ಸಂಘಗಳನ್ನು ಮಾಡಿ ಎಂದು ಮಾನ್ಯ ಮಂತ್ರಿಗಳಿಗೆ ಬರೆದಿದ್ದೆ. ನನ್ನ ಕ್ಷೇತ್ರವಾದ ವೇವ ಗಲ್, ಹೋಬಳಿಯಾಗಿರುವುದಲ್ಲದೆ, ಆ ತಾಲ್ಲೂಕಿನ ಮುಖ್ಯ ಸ್ಥಳವಾಗಿದೆ. ನಮ್ಮ ತಾಲ್ಲೂಕಿನಲ್ಲಿರುವ ಹೋಬಳಿಗಳಲ್ಲಿ ವೇಮಗಲ್ ಹೋಬಳಿಯೇ ದೊಡ್ಡದು. ಇವರ ವ್ಯಾಪ್ತಿಗೆ ಸುಮಾರು ೧೬ ಪಂಚಾಯತಿಗಳು ಬರುತ್ತವೆ. ಅಲ್ಲಿಂದ ನಾಲ್ಕೈದು ಮೈಲಿ ದೂರದಲ್ಲಿ ಶೆಟ್ಟಿಹಳ್ಳಿ ಎನ್ನುವ ಒಂದು ಗ್ರಾಮವಿದೆ. ಅದು ದೊಡ್ಡ ನೀರಾವರಿಯಾಗತಕ್ಕ ಪ್ರದೇಶ. ಅಲ್ಲಿ ಒಂದು ಸಹಕಾರ ಸಂಘ ಮಾಡಿ ಎಂದು ನಾನು ಮಾನ್ಯ ಮಂತ್ರಿಗಳನ್ನು ಅನೇಕ ಸಂದರ್ಭಗಳಲ್ಲಿ ಕೇಳಿದ್ದೇನೆ. ನೋಡೋಣ ಎಂದು ಹೇಳಿದ ಮಾನ್ಯ ಮಂತ್ರಿಗಳು, ಈಗ ಅದನ್ನು ಕೈಬಿಟ್ಟಿದ್ದು ಏತಕ್ಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ವೇಮಗಲ್ ಊರು ಸುತ್ತಮುತ್ತಲಿನ ಊರಿಗೆಲ್ಲಾ ಮುಖ್ಯ ಕ್ಷೇತ್ರವಾಗಿದ್ದರೂ, ಅಲ್ಲಿ ಸಹಕಾರ ಸಂಘವೊಂದನ್ನು ಮಾಡುವುದನ್ನು ಬಿಟ್ಟು, ಬೇರೆ ಕಡೆ ಮಾಡಿದ್ದಾರೆ. ಆದುದರಿಂದ, ನಾನು ಮೇಲೆ ಹೇಳಿದ ಎರಡು ಕಡೆಗಳಲ್ಲಿ ಎರಡು ಸಹಕಾರ ಸಂಘಗಳನ್ನು ಮಾಡುವುದಕ್ಕೆ ಎಲ್ಲಾ ವಿಧವಾದ ಅವಕಾಶವಿದೆ; ಅದನ್ನು ಮಾನ್ಯ ಮಂತ್ರಿಗಳು ಒಪ್ಪುತ್ತಾರಾದ್ದರಿಂದ, ಅಲ್ಲಿ ಎರಡು ಸಹಕಾರ ಸಂಘಗಳನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಡಿಫಾಲ್ಟರ್ ಆಗಿರುವವರು ಎಲ್ಲೂ ಕೂಡ ಮತ ನೀಡಬಾರದೆಂದು ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇದು ಕೂಡ ಬಹಳ ಯೋಗ್ಯವಾದ ತಿದ್ದುಪಡಿಯೆಂದು ನಾನು ಭಾವಿಸುತ್ತೇನೆ. ಕಾರಣ ಏನೆಂದರೆ ಒಂದಿಪ್ಪತ್ತು ಜನ ಸೇರಿ, ಒಂದು ಸಹಕಾರ ಸಂಘ ಎಂದು ಮಾಡಿಕೊಂಡು, ಸರ್ಕಾರದಿಂದ, ನಾಯಿ, ಕುರಿ, ಕೋಳಿ ಮುಂತಾದವುಗಳ ಹೆಸರಿನಲ್ಲಿ ಸಾಲ ಪಡೆದುಕೊಂಡು ಆ ಸಹಕಾರ ಸಂಘವನ್ನು ಮುಳುಗಿಸಿ, ಮತ್ತೊಂದು ಸಹಕಾರ ಸಂಘಕ್ಕೆ ಹೋಗಿ, ಅಲ್ಲಿ ಬೋರ್ಡ್ ಆಫ್ ಡೈರೆಕ್ಟರ್ಸ್ ಆಗುವುದೇ ಅಲ್ಲದೆ, ಅಧ್ಯಕ್ಷರಾಗಿರುವ ಅನೇಕ ನಿದರ್ಶನಗಳೂ ಇವೆ. ಇಂಥಾ ದುಷ್ಟ ಪದ್ಧತಿಗೆ ಕೊಡಲಿಪೆಟ್ಟಾಗಲಿರುವ ಇದನ್ನು ನಾನು ಸ್ವಾಗತಿಸುತ್ತೇನೆ.

ಹಳ್ಳಿ ಮಟ್ಟದಲ್ಲಿ ಒಂದು ವ್ಯವಸ್ಥಿತ ರೀತಿಯಲ್ಲಿ ಸಹಕಾರ ಸಂಘಗಳು ಕೆಲಸ ಮಾಡುವುದಕ್ಕೆ ಅನುಕೂಲವಾಗುವ ವ್ಯವಸ್ಥೆ ಈ ಮಸೂದೆಯಲ್ಲಿದೆ. ಇದು ಸ್ವಾಗತಾರ್ಹ. ಅದೇ ರೀತಿಯಲ್ಲಿ ರಾಜ್ಯ ಮಟ್ಟದಲ್ಲಿ, ಸಹಕಾರ ಸಂಘಗಳ ರಿಜಿಸ್ಟ್ರಾರ್ ಅವರು ಬೋರ್ಡ್ ಆಫ್ ಡೈರೆಕ್ಟರ್ ಆಗಿರುವ ಸಹಕಾರ ಸಂಘಗಳು ಇವೆ. ಅಲ್ಲಿ ನಡೆಯುತ್ತಿರುವ ದುರ್ವ್ಯವಹಾರಗಳನ್ನು ತಡೆಗಟ್ಟಲು ಇದೇ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆ. ಆ ಸಹಕಾರ ಸಂಘದಲ್ಲಿರುವವರು ಎಷ್ಟೇ ಪ್ರತಿಷ್ಠಿತರಾಗಿದ್ದರೂ, ಪ್ರಭಾವಶಾಲಿಗಳಾಗಿದ್ದರೂ, ಒಂದು ವೇಳೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದರಿಂದ ಮಾನ್ಯ ಮಂತ್ರಿಗಳ ಸ್ಥಾನಕ್ಕೆ ಚ್ಯುತಿ ಕೂಡ ಬಂದರೂ ಬರಬಹುದು—ಆದರೆ, ಅವರು ಅದನ್ನು ಲೆಕ್ಕಕ್ಕೆ ಇಡುವುದಿಲ್ಲವೆಂದು ನನ್ನ ಭಾವನೆ. ಆದುದರಿಂದ, ಮಾನ್ಯ ಮಂತ್ರಿಗಳಿಗೆ, ಅವರು ಸ್ಥಾನಕ್ಕೆ ಅಂಟಿಕೊಂಡು ಕುಳಿತುಕೊಳ್ಳುತ್ತಾರೆ ಎಂಬ ಅಪಖ್ಯಾತಿ ಬರಬಾರದು ಎಂದು ನಾನು ಹೇಳುತ್ತೇನೆ.

ಶ್ರೀ ಕೊಣಂದೂರು ಲಿಂಗಪ್ಪ.—ಅಂಥಾ ಪ್ರಭಾವಶಾಲಿಗಳೂ ಇದ್ದಾರೆಯೇ ?

ಶ್ರೀ ಸಿ. ಬೈರೇಗೌಡ.—ಮಾನ್ಯ ಸಚಿವ ರಂಗನಾಥರ ಸ್ಥಾನಪಲ್ಲಟವಾದರೂ ಆಗಬಹುದು. ಆದರೆ, ಅವರು ಅದಕ್ಕೆ ಹೆದರುವುದಿಲ್ಲ. ಆದುದರಿಂದ, ಮಾನ್ಯ ಮಂತ್ರಿಗಳು ಅಂಥವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿ, ಸಭೆಯ ಮುಂದಿಟ್ಟಿರುವ ಈ ತಿದ್ದುಪಡಿಯನ್ನು ಸಂಪೂರ್ಣವಾಗಿ ಬೆಂಬಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

[ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು]

† ಶ್ರೀ ಟಿ ಎಂ. ಮಂಜುನಾಥ (ತಿಪಟೂರು).—ಸನ್ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಮಂತ್ರಿಗಳು ಸಭೆಯ ಮುಂದೆ ತಂದಿರುವ ತಿದ್ದುಪಡಿಯನ್ನು ಅನುಮೋದಿಸುತ್ತಾ, ಇದರ ಬಗ್ಗೆ ಒಂದೆರಡು ಮಾತುಗಳನ್ನು ಆಡಬೇಕೆಂದು ಇಚ್ಛೆಪಡುತ್ತೇನೆ. ಸಹಕಾರ ಕ್ಷೇತ್ರದಲ್ಲಿ–ಗ್ರಾಮಾಂತರ ಪ್ರದೇಶಗಳಲ್ಲಿರುವ ದುರ್ಬಲ ವರ್ಗದವರಿಗೆ ಮತ್ತು ರೈತ ಜನರಿಗೆ ಸಾಲದ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಸರ್ಕಾರದವರು ಈ ಒಂದು ಒಳ್ಳೆಯ ತಿದ್ದುಪಡಿಯನ್ನು ತಂದಿದ್ದಾರೆ. ಇದನ್ನು ತಂದಂಥ ವೇಳೆಯಲ್ಲಿ, ಈ ಕಾನೂನಿನ ಕಾರ್ಯಾಚರಣೆಯನ್ನು ಯಾವ ರೀತಿ ಮಾಡಬೇಕೆಂಬುದನ್ನು ಮೊದಲೇ ವಿಚಾರ ವಿನಿಮಯ ಮಾಡಿ ಒಂದು ಒಳ್ಳೆಯ ದೃಷ್ಟಿಯಿಂದ ತಂದಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಹೀಗಿರುವಾಗ, ಈ ಕಾನೂನನ್ನು ಅಧಿಕಾರಿಗಳ ಕೈಗೆ ಕೊಟ್ಟಾಗ ಪಟ್ಟಭದ್ರ ಹಿತಾಸಕ್ತಿಗಳನ್ನು ಸಹಕಾರ ಸಂಘಗಳಿಂದ ಬಿಡಿಸುವುದಲ್ಲದೆ, ಕೆಲಸ ಮಾಡುವುದಕ್ಕೆ ಶಕ್ತಿ ಇಲ್ಲದಂಥ ಸಣ್ಣ ಸಣ್ಣ ಸೇವಾ ಸಹಕಾರ ಸಂಘಗಳನ್ನು ಕೂಡಿಸಿ, ಒಂದು ದೊಡ್ಡ ಸಂಸ್ಥೆಯನ್ನಾಗಿ ಮಾಡಿ, ಅದರ ವ್ಯಾಪ್ತಿಯನ್ನೂ ಜಾಸ್ತಿ ಮಾಡಿ, ಎಲ್ಲ ಸಹಾಯವನ್ನೂ ಇದರ ಮುಖಾಂತರ ಕೊಡಬೇಕೆಂದು ಸರ್ಕಾರದವರು ಇರುವಾಗ ಇವರ ಜವಾಬ್ದಾರಿ ಏನು? ಇದರ ಬಗ್ಗೆ ಸರ್ಕಾರದವರು ಸ್ವಲ್ಪ ಗಮನ ಹರಿಸಬೇಕಾದುದು ಬಹಳ ಮುಖ್ಯವಾದುದು. ಮಾನ್ಯ ಮಂತ್ರಿಗಳು ಇದನ್ನು ಬಹಳ ಒಳ್ಳೆಯ ದೃಷ್ಟಿಯಿಂದ ತಂದಿದ್ದಾರೆ. ಆದರೆ ಈ ಕಾನೂನು ಅಧಿಕಾರಿಗಳ ಕೈಗೆ ಸಿಕ್ಕಿದಾಗ, ಅದನ್ನು ನಿಸ್ಪೃಹತೆಯಿಂದ ಜಾರಿಗೆ ಕೊಡುವಂಥ ಅಧಿಕಾರಿಗಳ ಸಂಖ್ಯೆ ನಮ್ಮಲ್ಲಿ ಕಡಿಮೆಯಿದೆ. ಒಂದು ಉದಾಹರಣೆ ಹೇಳುತ್ತೇನೆ. ಒಬ್ಬ ಜವಾಬ್ದಾರಿಯುತ ಜಿಲ್ಲಾ ಮಟ್ಟದ ಅಧಿಕಾರಿಯ ಬಳಿ ಹೋಗಿ, ನಮ್ಮ ತಾಲ್ಲೂಕಿನ ಸಹಕಾರ ಸಂಘಗಳಲ್ಲಿರತಕ್ಕ ನ್ಯೂನತೆಗಳನ್ನು ಅವರ ಮುಂದೆ ಇಟ್ಟಾಗ, ಆಗ ಅವರು ಹೇಳಿದ್ದು: "ನೀವು ಈ ವಿಚಾರವನ್ನೆಲ್ಲಾ ಶಾಸನ ಸಭೆಗಳಲ್ಲಿ ಮಾತನಾಡಿ" ಎಂದು. ಈ ರೀತಿಯ ಉದ್ಧಟತನ ನಮ್ಮ ಅಧಿಕಾರಿಗಳಲ್ಲಿ ಬರತಕ್ಕದ್ದನ್ನು ನಾವು ನೋಡಿದ್ದೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕನಾದವನಿಗೆ ದೇಶದಲ್ಲಿನ ಆಗುಹೋಗುಗಳ ಬಗ್ಗೆ ಮತ್ತು ನಾಗರೀಕರ ಸೌಲಭ್ಯಗಳನ್ನು ಕೇಳುವ ಹಕ್ಕು ಇಲ್ಲವೆ? ಜಿಲ್ಲಾ ಮಟ್ಟದಲ್ಲಿರತಕ್ಕ ಒಬ್ಬ ಸಹಕಾರ ಸಂಘದ ಅಧಿಕಾರಿ ಈ ಮಟ್ಟದಲ್ಲಿ ಮಾತನಾಡಿದರೆ, ಇನ್ನು ಯಾವ ಮಟ್ಟದಲ್ಲಿ ಆತ ಸರ್ಕಾರದ ಆದೇಶಗಳನ್ನು ಪರಿಪಾಲನೆ ಮಾಡುತ್ತಾನೆ ಎಂಬುದನ್ನು ನಾವು ನೋಡಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚು ಗಮನ ಕೊಡಬೇಕು. ಮಹತ್ತರವಾದ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡು, ಕರ್ನಾಟಕದ ಪ್ರತಿಯೊಬ್ಬ ಪ್ರಜೆಗೂ ಈ ಕಾನೂನಿನ ಪ್ರಯೋಜನ ಸಿಗಬೇಕು; ಆರ್ಥಿಕ ಕಾರ್ಯಕ್ರಮಗಳ ಮುಖಾಂತರ ಅವರ ಜೀವನ ಉತ್ತಮಗೊಳ್ಳುವಂತೆ ಮಾಡಬೇಕೆಂಬ ದೃಷ್ಟಿಯಿಂದ ಕಾನೂನುಗಳನ್ನು ತಂದಾಗ, ಅವುಗಳನ್ನು ಯಶಸ್ವಿಯಾಗಿ ಕಾರ್ಯಾಚರಣೆ ಮಾಡುವುದಕ್ಕೆ ಒಂದು ಕಡೆ ಪಟ್ಟಭದ್ರ ಹಿತಾಸಕ್ತಿಗಳು, ಇನ್ನೊಂದು ಕಡೆ ಬೇಜವಾಬ್ದಾರಿಯಿಂದ ಕೂಡಿದ ಅಧಿಕಾರಿಗಳು ಅವಕಾಶ ಕೊಡುತ್ತಾ ಇಲ್ಲ.

ಇದರ ಬಗ್ಗೆ ತಾವು ಹೆಚ್ಚಿನ ಜವಾಬ್ದಾರಿಯನ್ನು ವಹಿಸಬೇಕು. ತಮಗೆ ಗೊತ್ತಿರುವ ಹಾಗೆ ಈ ರೀ-ಆರ್ಗನೈಸೇಷನ್ ವಿಚಾರವಾಗಿ ತಮಗೆ ಹೆಚ್ಚಿನ ಪರಿಶ್ರಮ ಇರಬೇಕು. ದೇಶದ ಎಲ್ಲಾ ವಿಚಾರಗಳನ್ನು ತಾವು ಒಬ್ಬರೇ ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ತಾವು ನೇಮಿಸಿರತಕ್ಕ ಅಧಿಕಾರಿಗಳು ತಮ್ಮ ಕಾನೂನಿನ ವ್ಯಾಪ್ತಿಯಲ್ಲಿ ಕೆಲಸ ಮಾಡಿದರೆ ಬಹಳ ಸಂತೋಷ. ಆದರೆ ಅವರು ವ್ಯಾಪ್ತಿಯನ್ನು ಬಿಟ್ಟು ತಮ್ಮ ಮನಸ್ಸಿಗೆ ಬಂದಂಥ ರೀತಿಯಲ್ಲಿ ವರ್ತನೆ ಮಾಡಿ ಇವತ್ತಿನ ದಿವಸ ಎಷ್ಟರಮಟ್ಟಿಗೆ ಸರ್ಕಾರದ ಕೆಲಸ ಕಾರ್ಯಗಳು ಆಗಬೇಕಾಗಿತ್ತೋ ಅಷ್ಟು ಆಗದೆ, ಅಧಿಕಾರಿಗಳು ಸರ್ಕಾರಕ್ಕೆ ಕಪ್ಪು ಮಸಿಯನ್ನು ಬಳಿಯತಕ್ಕ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ರೀತಿ ಅವರು ಮಾಡುವ ಕೆಲಸದಿಂದ ಸರ್ಕಾರಕ್ಕೆ ಕಳಂಕ ಬರುತ್ತದೆ. ಸರ್ಕಾರದವರು ಇದನ್ನು ಮುಖ್ಯವಾಗಿ ಮನಗಾಣಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ, ನನ್ನ ತಾಲ್ಲೂಕಿನಲ್ಲಿ ಒಂದು ದೊಡ್ಡ ರೈತರ ಸೊಸೈಟಿಯನ್ನು ಸ್ಥಾಪನೆ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಸ್ಥಾಪನೆ ಮಾಡಿದರು. ಇದನ್ನು ಸ್ಥಾಪನೆ ಮಾಡುವಾಗ ಇದರ ವ್ಯಾಪ್ತಿಯಲ್ಲಿ ಇಷ್ಟು ಸೇವಾ ಸಹಕಾರ ಸಂಘಗಳು ಬರಬೇಕು ಅದರ ಮುಖಾಂತರ ರೈತರಿಗೆ ನ್ಯಾಷನಲೈಸ್ಡ್ ಬ್ಯಾಂಕುಗಳಿಂದ ಸಾಲ ಕೊಡಿಸುವ ವ್ಯವಸ್ಥೆ ಮಾಡಬೇಕು ಎಂದು ತೀರ್ಮಾನ ಮಾಡಿದ್ದೆವು. ಆದರೆ ಇಲ್ಲಿ ಅಧಿಕಾರಿಗಳು ಶಾಮೀಲಾಗಿ, ಇದರ ವ್ಯಾಪ್ತಿಯನ್ನು ಸುಮಾರು ೬-೭ ಮೈಲಿಯವರೆಗೆ ಮಾತ್ರ ಸೇರಿಸಿ ಇವತ್ತು ಜನತೆಗೆ ಸಿಕ್ಕಬೇಕಾದ ಸೌಲಭ್ಯಗಳನ್ನು ಸಿಗದಂತೆ ಮಾಡಿ ಅಧಿಕಾರಿಗಳು ರೈತರಿಗೆ ದ್ರೋಹವನ್ನು ಎಸಗಿದ್ದಾರೆ.

5-30 P.M.

[ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು]

ಇವತ್ತು ಯಾರೇ ಮಂತ್ರಿಗಳಾಗಲೀ, ಅಧಿಕಾರ ಸ್ಥಾನದಲ್ಲಿ ಇರಲಿ, ಅಧಿಕಾರಿಗಳು ಹೇಳಿದ್ದನ್ನು ಕೇಳುವುದು ಸ್ವಾಭಾವಿಕ. ಆದರೆ ಅಧಿಕಾರಿಗಳು ಮಾಡುವ ಲೋಪದೋಷಗಳನ್ನು ಸರ್ಕಾರದ ಗಮನಕ್ಕೆ ತರುವುದು ನಮ್ಮ ಕರ್ತವ್ಯ. ಅನೇಕ ಡಿಫಾಲ್ಟ್ ಸೊಸೈಟಿಗಳನ್ನು ಅಮಾಲ್ಗಮೇಟ್ ಮಾಡಿದ್ದಾರೆ. ಇಂಥ ಕೆಲವು ಕಡೆ ಗೋಡೌನ್ ಇಲ್ಲ, ದುಡ್ಡು ಇಲ್ಲ. ಇಂಥ ಲೋಪದೋಷಗಳನ್ನು ಅಧಿಕಾರಿಗಳು ಮಾಡಿದ್ದಾರೆ. ಆದ್ದರಿಂದ ನಾನು ಸರ್ಕಾರಕ್ಕೆ ಕಳಕಳಿಯ ಪ್ರಾರ್ಥನೆ ಮಾಡುತ್ತೇನೆ, ತಾವು ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡುವ ವಿಷಯವನ್ನು ಇನ್ನೊಮ್ಮೆ ಪರಿಶೀಲನೆ ಮಾಡಬೇಕು ಇವರಿಗೆ ಪೂರ್ಣ ಅಧಿಕಾರವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾತ್ರ ಮಾಡಬೇಕು. ಇವತ್ತಿನ ದಿವಸ ನಮ್ಮ ತಾಲ್ಲೂಕಿನಲ್ಲಿ ಹಿಂದೆ ಎಷ್ಟರಮಟ್ಟಿಗೆ ಸಹಕಾರ ತತ್ವದಲ್ಲಿ ಜನತೆಗೆ ನಂಬಿಕೆಯಿತ್ತೋ ಅದು ಈಗ ಹೋಗುವುದಕ್ಕೆ ಪ್ರಾರಂಭವಾಗಿದೆ. ತಾವು ಸದುದ್ದೇಶದಿಂದ ಈ ಮಸೂದೆಯನ್ನು ತಂದಿದ್ದೀರಿ. ಮಾನ್ಯ ಸ್ನೇಹಿತರು ಹೇಳಿದಂತೆ, ಈ ಸೇವಾ ಸಹಕಾರ ಸಂಘಗಳಲ್ಲಿ ಪ್ರಾಮಾಣಿಕರಾದ ಹಾಗೂ ಸಮಾಜ ಸೇವೆ ಮಾಡತಕ್ಕ ಕಾರ್ಯಕರ್ತರನ್ನು ನೇಮಕ ಮಾಡಬೇಕು. ಸೊಸೈಟಿಗಳಲ್ಲಿ ಡಿಫಾಲ್ಟ್ ಆಗಿರತಕ್ಕವರನ್ನು, ಕ್ರಿಮಿನಲ್ ಕೇಸುಗಳಲ್ಲಿ ಒಳಗಾಗಿರತಕ್ಕವರನ್ನು ಇಂಥ ಸೇವಾ ಸಹಕಾರ ಸಂಘಗಳಲ್ಲಿ ನೇಮಿಸಬೇಡಿ. ನಾನು ಮೊದಲೇ ಹೇಳಿದಂತೆ ಒಬ್ಬ ಅಧಿಕಾರಿ, ಸರ್ಕಾರದ ಕೆಲಸ ಕಾರ್ಯಗಳನ್ನು ಶಾಸನಸಭಾ ಸದಸ್ಯರು ಕೇಳುವುದಕ್ಕೆ ಹಕ್ಕಿಲ್ಲ ಎಂದು ಹೇಳಿದರೆ ಇದು ಹೇಗೆ? ಇಂಥವರ ಮೇಲೆ ತಾವು ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ, ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† SRI B. B. SAYANAK (Belgaum).—Mr. Deputy Speaker, I rise not to fully support this Bill but to support it half-heartedly because before these Co-operative Societies have come into existence, the rich people were squeezing the blood of the poor and the weaker sections. That is why this Co-operative Societies Act has come into force. After 27 years of our independence we have not got the success to do justice to the poor and the weaker sections of the people. Some of the interested persons have started the societies to grab the money and to mint the money and to be rich. The Government has got information regarding the Societies. There are so many defunct Societies also. Now the Reserve Bank and the Government of India have proposed to reorganise the Societies and to amalgamate some of the Societies. In my District, specially in my Taluk, it is surprising to note that there are some defunct Societies. There are good Societies also which may be amalgamated. I want to ask whom you are going to give powers when there are defunct Societies. In my village there is a best Society. If that Society is going to be amalgamated with a defunct Society which is called Piranvadi Khadarwadi Society, to whom on the Board you are going to give powers. The Department has not given justice to the Societies which are working very nicely. I am referring to the Society of Angol, Piranvadi Society is a defunct Society. You have given 5 seats for this defunct Society. The best Society of Angol has been given only 2 seats. Is this a justice to give only 2 seats to a good society and 5 seats to a defunct Society? If that the intention of the Government to amalgamate

and do justice in this manner? There is another Society called Vivid Society of Kalakam amalgamated with Kanbargi Society. The Deputy Registrar has given powers to the defunct Society. There is another Society called Santhi Bistawad Society which is amalgamated with a Society which was a defunct one. The Deputy Registrar has selected 3 members who are not members of the Society In this the intention of the Government to do justice to the weaker sections of the Society? one man is appointed Chairman of that society. He is not at all alike. According to me no justice is done to the poorer sections and weaker sections. There is politics in these appointments also The influential person went to the officer and requested him to appoint all these persons by amalgamating or reorganisingthe societies The intention of the Central Government and the Reserve Bank is to help the weaker sections and poorer sections, but the intention of the politicians is not so. According to me, these politicians do not want to do justice to the weaker and poorer sections. Such things have happened in my Taluka and my area, and I have brought all these things to the notice of the Government.

To quote another instance, the Chairman of a Gardeners' Co-operative Society is a Director of the Taluka Marketing Society. I cannot understand how it has happened- If such things are to happen, I am of the opinion that the societies are run by only a selected few. If the Government wants to do justice, justice should be done to the weaker and poorer sections by giving them membership in societies. When we were in the Bombay Presidency, the Board of Directors of the Management of Angol society had passed a resolution long back that any person who is going to purchase 20 shares will be a Member. After the promulgation of the Ordinance, a man who is going to apply for the membership is deemed to be a Member. Though there is an Ordinance, that Society has not allowed poor people to become members and they were not even given the forms I have brought this to the notice of the Deputy Registrar and the Assistant Registrar but they never care for the poor people. If such things were to happen what will be the fate of the poor people? I do not know whether this society is meant for rich people alone? They are not allowing even the Harijans to become members not even the Marathi people. This society is in the hands of a person who is the Treasurer of the Congress Party, How can such a person do justice to the Party or the poor people? I request the Government to give a go by to such persons and try to do justice to the poorer and weaker sections.

There is a Janata Bazaar in Belgaum City. According to me Rs. 12 lakhs have been grabbed by the Chairman and Directors of this Janatha Bazar, but no action has been taken by the Government. Now, another Janata bazaar has been opened in Belgaum. The Taluka

Marketing Society was doing very good service to the public. The Government has taken over the business of sugar from that society and given it to the recently registered society of the Janata Bazaar. When a loan has to be given, we have to see the soundness of the person and then give the loan.

MR. DEPUTY SPEAKER —The hon'ble member may please speak with in the scope of the bill before the House.

SRI B. B. SAYANAK.—This was done just because the Taluka Marketing Society is in the hands of Marati people.

SRI K. H. RANGANATH. I do not know, and it is not the intention of the Government to make any discrimination between Marathi or Kannada people. I do not know whether the recently started wholesale stores is in the hands of Kannada people or Marathi people.

SRI B B. SAYANAK —I think the Hon'ble Minister is aware that Sri Kotra Setty, Member of Parliament, has started this society.

SRI K. H. RANGANATH.—As I have already clearly stated, the Government's intention is not to make any discrimination between Marathi people and Kannada people. Let not the hon'ble member bring in that type of politics here.

MR. DEPUTY SPEAKER.—If the Hon'ble Member has got any such grievance, he may discuss it with the Hon'ble Minister. All that the hon'ble member is speaking is not strictly within the scope of the Bill

SRI B. B. SAYANAK.—Though I have brought all these things to the notice of the Deputy Registrar and the Assistant Registrar, they do not care If I do not point out all these things, I will not be able to do Justice to the people.

SRI D. DEVARAJ URS.—The Hon'ble Member could have written about this to the Minisser concerned.

SRI K. H, RANGANATH.—Sir, we are aware that he has not written any letter.

SRI B. B. SAYANAK.—But, I have brought this to the notice of the Deputy Registrar and Assistant Registrar. I request the Government to see that such things should not happen hence-forward at least.

With these few words, I thank the Chair.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ). ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಹಕಾರ ಸಚಿವರು ತಂದಿರತಕ್ಕಂಥ ತಿದ್ದುಪಡಿ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತಾ ಒಂದೆರಡು ವಿಚಾರ ಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಎಲ್ಲರೂ ಸ್ವಾಗತ ಮಾಡಿದ್ದಾರೆ. ಎಲ್ಲೋ ಒಬ್ಬರು ಅಥವಾ ಇಬ್ಬರು ಮಾನ್ಯ ಸ್ನೇಹಿತರು ಸ್ವಲ್ಪ

ವಿರೋಧ ವ್ಯಕ್ತ ಪಡಿಸಿದರೂ ಕೂಡ. ಒಟ್ಟಾರೆ ಈ ಮನೆಯಲ್ಲಿ ಇದಕ್ಕೆ ಸಂಪೂರ್ಣವಾದಂಥ ಬೆಂಬಲವನ್ನು ಎಲ್ಲ ಮಾನ್ಯ ಸದಸ್ಯರೂ ಸೂಚಿಸಿದ್ದಾರೆಂದು ನಾನಾದರೂ ಹೇಳುವುದಕ್ಕೆ ಸಂತೋಷಪಡುತ್ತೇನೆ. ಈ ದಿವಸ ನಮ್ಮ ಮಾನ್ಯ ರಂಗನಾಥ ಅವರು ಈ ಸಹಕಾರ ಸೊಸೈಟಿಗಳಿಗೆ ಕಾಯಕಲ್ಪ ಕೊಡಬೇಕೆಂದುಕೊಂಡು ಆ ಬಗ್ಗೆ ಒಂದು ದೊಡ್ಡ ಹೆಜ್ಜೆ ಇಟ್ಟಿದ್ದಾರೆಂದು ನಾನಾದರೂ ಹೇಳಬೇಕಾಗುತ್ತದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈ ಬಗ್ಗೆ ಬಿಚ್ಚು ಮನಸ್ಸಿನಿಂದ ಮಾತನಾಡಿದರು. ಲೋಪದೋಷಗಳು ಅಲ್ಪಸ್ವಲ್ಪ ಇರಬಹುದು. ಅದನ್ನು ಸರಿಪಡಿಸತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡುತ್ತೇವೆಂದು ಅವರು ಹೇಳಿದ್ದಾರೆ. ಆದಕಾರಣ ಇದೊಂದು ಕ್ರಾಂತಿಕಾರಕವಾದಂಥ ಹೆಜ್ಜೆಯಾಗಿದೆ ಎಂಬುದಾಗಿ ನಾನಾದರೂ ಕೂಡ ಹೇಳುವುದಕ್ಕೆ ಇಷ್ಟಪಡುತ್ತೇನೆ. ೮ ಸಾವಿರ ಚಿಲರೆ ಸೊಸೈಟಿಗಳ ಪೈಕಿ ಎಲ್ಲವೂ ಕೂಡ ಪಟ್ಟ ಭದ್ರ ಹಿತಾಸಕ್ತಿಗಳ ಕೈಯಲ್ಲಿದ್ದವು ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ತಪ್ಪಿಸುವ ಸಲುವಾಗಿ, ಡೈರಕ್ಟರ್‌ಗಳನ್ನು ಆಯಾ ಸೊಸೈಟಿಗಳಿಗೆ ನಾಮಕರಣ ಮಾಡುವಾಗ ಹರಿಜನರಿಗೆ, ಗಿರಿಜನರಿಗೆ, ದುರ್ಬಲ ವರ್ಗದವರಿಗೆ, ಸಣ್ಣ ಹಿಡುವಳಿದಾರರಿಗೆ ಈ ರೀತಿ ಎಲ್ಲ ವರ್ಗದವರಿಗೂ ಸೂಕ್ತ ಪ್ರಾತಿನಿಧ್ಯ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ನಮ್ಮ ಸರ್ಕಾರದವರು ಮಾಡಿಕೊಟ್ಟಿದ್ದಾರೆ. ಈ ಒಂದು ವ್ಯವಸ್ಥೆ ಮೊದಲು ಇರಲಿಲ್ಲ; ಈ ಒಂದು ದೃಷ್ಟಿಯಲ್ಲಿ ಸರ್ಕಾರದವರು ಒಂದು ಕ್ರಾಂತಿಕಾರಕವಾದಂಥ ಮಾರ್ಪಾಡನ್ನು ಮಾಡಿದ್ದಾರೆ. ಈ ಒಂದು ಕ್ರಾಂತಿಕಾರಕವಾದಂಥ ಬದಲಾವಣೆಯನ್ನು ಮಾಡಿದ್ದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಮಾನ್ಯ ಸಹಕಾರ ಸಚಿವರನ್ನು ಅಭಿನಂದಿಸುತ್ತೇನೆ. ಈಗ ಕೆಲವು ಕಡೆಗಳಲ್ಲಿ ಅಲ್ಪಸ್ವಲ್ಪ ಲೋಪದೋಷಗಳು ಇರಬಹುದು; ಕೆಲವು ಸಂದರ್ಭಗಳಲ್ಲಿ ಶಾಸಕರು, ಮುಖಂಡರುಗಳು ಸರ್ಕಾರಕ್ಕೆ ಹೇಳಿ ನಾಮಕರಣ ಮಾಡಿಸಿರಬಹುದು. ಆದರೆ ಸರ್ಕಾರಕ್ಕೆ ಎಲ್ಲರ ವಿಚಾರವೂ ಗೊತ್ತಿದೆ, ಗೊತ್ತಿದ್ದು ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಹಣ ದುರುಪಯೋಗ ಪಡಿಸಿದವರನ್ನು ಏನಾದರೂ ಅಧ್ಯಕ್ಷರನ್ನಾಗಿ ಅಥವಾ ಡೈರಕ್ಟರನ್ನಾಗಿ ನೇಮಕ ಮಾಡಿದ್ದರೆ, ಅಂಥವರ ಹೆಸರನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರೆ, ಅಂತಹವರನ್ನು ಡೈರಕ್ಟರ್ ಮಂಡಲಿಯಿಂದ ತೆಗೆಯುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಏರ್ಪಾಡು ಮಾಡುತ್ತಾರೆ. ಈ ಆಕ್ಟಿನಲ್ಲಿ ಅದಕ್ಕೆ ಅವಕಾಶವಿದೆ. ಆದಕಾರಣ, ಇದರಲ್ಲಿ ಏನೋ ನಡೆದಿದೆ, ಅವರ ಪಕ್ಷದವರನ್ನೇ ಹಾಕಿದ್ದಾರೆ, ಡೈರಕ್ಟರ್ ಮಂಡಲಿಗೆ ನಾಮಿನೇಟ್ ಮಾಡಿದ್ದಾರೆಂದು ಯಾರಾದರೂ ತಿಳಿದಿದ್ದರೆ ಅದು ತಪ್ಪಾಗುತ್ತದೆ. ಏಕೆಂದರೆ, ಡೈರಕ್ಟರ್ ಮಂಡಲಿಗೆ ಎಲ್ಲ ಪಕ್ಷದವರನ್ನು, ಎಲ್ಲ ಪಂಗಡದವರನ್ನು ಅಂದರೆ, ದುರ್ಬಲ ವರ್ಗದವರನ್ನು, ಹರಿಜನ ಮತ್ತು ಗಿರಿಜನರನ್ನು, ಸಣ್ಣ ಹಿಡುವಳಿದಾರರನ್ನು ನಾಮಕರಣ ಮಾಡಲಾಗಿದೆ, ಈ ಎಲ್ಲ ದೃಷ್ಟಿಯಿಂದ ಸರ್ಕಾರ ಒಂದು ಪರಿಣಾಮಕಾರಿಯಾದಂಥ ಮತ್ತು ಕ್ರಾಂತಿಕಾರಕವಾದಂಥ ಹೆಜ್ಜೆಯನ್ನು ಇಟ್ಟಿದೆ ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದಕ್ಕೆ ಮೊದಲು ಅನೇಕ ಸೊಸೈಟಿಗಳು ಜೀವಂತವಿರಲಿಲ್ಲ. ಅಂತಹ ಸೊಸೈಟಿಗಳನ್ನು ಮುಂದುವರಿಸಿಕೊಂಡು ಹೋಗುವುದು ಅನಾವಶ್ಯಕವಾಗಿತ್ತು. ಇದನ್ನೆಲ್ಲಾ ಸರ್ಕಾರ ವಿಚಾರ ಮಾಡಿ, ಅಂತಹ ಸೊಸೈಟಿಗಳಿಗೆ ಕಾಯಕಲ್ಪ ಕೊಡಬೇಕು, ಅವುಗಳು ಚೆನ್ನಾಗಿ ಕೆಲಸ ಮಾಡುವಂತಾಗಬೇಕು ಮತ್ತು ಆ ಮೂಲಕ ದೇಶದ ರೈತರಿಗೆ, ಕಾರ್ಮಿಕರಿಗೆ ಹಾಗೂ ಎಲ್ಲ ವರ್ಗದ ಜನತೆಗೂ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂಬ ಆಸೆ ಇಟ್ಟುಕೊಂಡು ಈ ಒಂದು ಕಾರ್ಯವನ್ನು ಮಾಡಿದೆ. ಇದರಲ್ಲಿ ಕೆಲವು ಲೋಪದೋಷಗಳಿರಬಹುದು, ಆ ಬಗ್ಗೆ ಅನೇಕ ಮಾನ್ಯ ಸದಸ್ಯರು ಕೆಲವಾರು ಸಲಹೆಗಳನ್ನು ಮಾನ್ಯ ಮಂತ್ರಿಗಳಿಗೆ ಕೊಟ್ಟಿದ್ದಾರೆ. ಅವುಗಳನ್ನೆಲ್ಲಾ ಸರಿಪಡಿಸತಕ್ಕಂಥ ಒಂದು ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮಾಡಬೇಕು. ಈಗ ಕೆಲವು ಕಡೆಗಳಲ್ಲಿ ಸೊಸೈಟಿಗಳನ್ನು ಒಂದುಗೂಡಿಸುವ ವ್ಯವಸ್ಥೆ ಮಾಡುತ್ತಿರುವುದು ಕೆಲವು ಸಂದರ್ಭಗಳಲ್ಲಿ ರೈತರು ೫-೬ ಮೈಲಿಗಳ ದೂರದವರೆಗೆ ಹೋಗುವ ಸಂದರ್ಭಗಳು ಬಂದಿವೆ; ಇಂತಹ ಸಂದರ್ಭಗಳಲ್ಲಿ ಅವಶ್ಯಕವಾಗಿ ಪುನರ್‌ಪರಿಶೀಲಿಸಿ ಸರಿಪಡಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI K. PUTTASWAMY (Chamundeswari).— Sir, while according my support to this Bill, I wish to bring to the notice of this House certain doubts about the necessity of two or three provisions. I am sure the Hon'ble Minister would be able to remove the doubts that I entertained. First I refer to original section 14-A. to find out difference between the original section 14A with clause 2 which seeks

to replace a new section. I have read and re-read this section and I have found apart from the verbal changes only deletion of two items. The original section prescribes that the Central Financial agency shall be consulted by the State Government The proviso requires which states that in case of Co-operative Bank, no order shall be made or given effect to without the previous sanction of the Reserve Bank of India I am one of those who share the anxiety of the Government in expediting the reorganisation of co-operative societies. I have congratulated the Hon'ble Minister for taking a bold decision regarding the amalgamation of societies and making them viable. But in our anxiety to reorganise the societies, we should not ignore the past the Central Financial Agency plays.

6-00 P. M.

It is the central agencies which have the knowledge of the working of other primary societies. The central agency is in a position to tell us whether a primary co-operative society is a viable one or not, whether a primary society has been functioning well or not. What is the object of removing this protection ? The original section 14 (A) was provided in order to protect to interest of viable societies which are working well. This protection is sought to be removed by this amendment. I wish the Hon'ble Minister will bestow a second thought on this. May be, there may be some good reason. I was not able to get it in the statement of objects and Reasons. Perhaps in their anxiety to complete re-organisation soon their amendment is sought to be moved. I am sure the central agencies are in the hands of very efficient persons, persons who are imbued with the spirit of co-operation, persons who are anxious to help the Government. I am also confident that there would not be any delay at the level of central agencies. In addition to this Government have also powers to take over the central agencies if they do not work properly. I take it that the central agencies which are in existence are in a position to assist the Government in seeing that amalgamation and re-organisation goes through without any delay. I have not been able to understand the object of this amendment section.

Now, I come to the proviso relating to co-operative banks. Now the Government is not at present engaging its attention in reorganisation or amalgation of co-operative banks. Even if they are keen there can be no harm in following the requirement and the proviso As far as the reorganisation of co-operative banks are concerned, the condition is that the order shall not be given effect to without the previous sanction of the Reserve Bank. While framing the existing section, perhaps they have thought that it was necessary to consult the Reserve Bank and take their approval. If this proviso

had been continued, it would not have come in the way of Government. I do not think it is necessary to delete this proviso. Why not we retain this safeguard as far as the co-operative banks are concerned?

Now, I pass on to Section 29 (c). In the existing section 29 (c) the portion that is sought to be deleted is this:

> "If any question arises whether any person is a near relation or not, the same shall be decided by the Registrar and his decision shall be final."

Where is the need for deleting it? This can be allowed to continue. The removal of this sub-section is not so urgent and I do not find any reason for its deletion.

Now, I pass on to the most important provision, namely, the substitution of new sections for section 30A dealing with the appointment of Special Officer. The power of supersession is available to government in the Act. The requirement to issue notice, hear the objections and then to pass an order. That is a justiciable order. The amendment seeks to achieve the same result without giving hearing. I would like the Government to ponder over and consider whether this is necessary.

Finally I come to clause 7 which deals with amendment of section 127. Section 127 deals with indemnity. Under section 127 indemnity is given to the Registrar or any person subordinate to him or acting on his authority in respect of anything done in good faith This is a general provision which we find in every enactment to safeguard the interest of the officers who are in charge of running the administration. Here, shelter of indemnity is sought to be extended to the new committee, the administrators of special officers that Government would appoint. I can understand it if the Administrator or the Special Officer is a Government servant. Now here is it stated that the Administrator or the special officer should be a Government servant; he may be a non-official. The new committee is definitely not one which would consist of only Government servants. When protection is not given to an elected body, why should there be protection to this category? The Hon'ble Minister may consider this.

With these remarks I thank the Hon'ble the Deputy Speaker for having given me some time though it is beyond 6 p. m.

† ಶ್ರೀ ಎಂ. ಎಸ್ ಕೃಷ್ಣನ್ (ಮಲ್ಲೇಶ್ವರ).— ಸನ್ಮಾನ್ಯ ಉಪಾಧ್ಯಕ್ಷರೇ, ಈ ಮಸೂದೆಯನ್ನು ನಾನೂ ಸಹ ಸ್ವಾಗತಿಸುತ್ತೇನೆ. ಈ ಮಸೂದೆಯನ್ನು ಸ್ವಾಗತಿಸುವಾಗ ನಮ್ಮ ಅನೇಕ ಮಿತ್ರರು ಅಂದರೆ ಮುಖ್ಯವಾಗಿ ಶ್ರೀಮಾನ್ ಗಟ್ಟಿ ಚಂದ್ರಶೇಖರ್ ಅವರು ಮತ್ತು ಕೋಣಂದೂರು ಲಿಂಗಪ್ಪನವರು ಸಹಕಾರ ಸಂಘಗಳು ಯಾವರೀತಿ ನಡೆದುಕೊಳ್ಳುತ್ತಾ ಇವೆ ಎನ್ನುವುದನ್ನು ಬಹಳ ವಿವರವಾಗಿ ಮತ್ತು ವಿಶದವಾಗಿ ತಿಳಿಸಿದಾರೆ. ನಾನು ಅದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಅದರ ಜೊತೆಯಲ್ಲಿ

ಒಂದು ಮಾತನ್ನು ಹೇಳಬೇಕಾಗಿದೆ. ಮಾನ್ಯ ಕೋಣಂದೂರು ಲಿಂಗಪ್ಪನವರು ಹೇಳಿದ ಹಾಗೆ ಕೋಆಪರೇಟೀವ್ ಸೊಸೈಟಿಗಳ ಬಗ್ಗೆ ತಾವು ಗಮನಹರಿಸಿ ಅದಕ್ಕೆ ಶಸ್ತ್ರಚಿಕಿತ್ಸೆ ಮಾಡುವುದಕ್ಕೆ ಹೊರಟಿರುವುದು ಮತ್ತು ಅವಕ್ಕೆ ಚೇತನವನ್ನು ಕೊಡುವುದಕ್ಕೆ ಹೊರಟಿರುವುದು ಸಂತೋಷದ ವಿಷಯ ಏಕೆಂದರೆ, ಸೊಸೈಟಿಗಳಲ್ಲಿ ನಡೆಯುತ್ತಾ ಇರತಕ್ಕಂಥ ಅವ್ಯವಹಾರಗಳು ಸಾಕಾದಷ್ಟು ಬೆಳಕಿಗೆ ಬಂದಿವೆ. ಯಾವ ಯಾವ ಸೊಸೈಟಿಗಳು ಹೇಗೆ ಹೇಗೆ ಇವೆ ಎನ್ನುವುದನ್ನು ವಿವರವಾಗಿ ಹೇಳುವುದಕ್ಕೆ ನಾನು ಹೋಗುವುದಿಲ್ಲ. ನಮ್ಮ ರಾಜ್ಯದಲ್ಲಿ ತಾಲ್ಲೂಕು ಮಟ್ಟದಲ್ಲಿ ಹಾಗು ಜಿಲ್ಲಾ ಮಟ್ಟದಲ್ಲಿ ಇರತಕ್ಕಂಥ ಅನೇಕ ಸೊಸೈಟಿಗಳಲ್ಲಿ ಬೇಕಾದಷ್ಟು ಅವ್ಯವಹಾರಗಳು ನಡೆದಿವೆ; ನಡೆಯುತ್ತಾ ಇವೆ, ಇವು ತಮ್ಮ ರಾಜಕೀಯ ಪ್ರಭಾವವನ್ನು ಉಪಯೋಗಿಸಿಕೊಳ್ಳುತ್ತಿವೆ. ಇಂತಹವುಗಳನ್ನು ಮಂತ್ರಿಗಳು ಉಳಿಸಿರತಕ್ಕಂಥ ಉದಾಹರಣೆಗಳೂ ಇವೆ. ಇದರಿಂದ ಆ ಸೊಸೈಟಿಗಳು ಸಣ್ಣ ಇಲಿಗಳಾಗಿದ್ದಂತಹವು ದೊಡ್ಡ ಹೆಗ್ಗಣಗಳು, ತಿಮಿಂಗಿಲಗಳಾಗಿ ನುಂಗುತ್ತಿವೆ. ಈ ರೀತಿ ಸೊಸೈಟಿಗಳಲ್ಲಿ ಅವ್ಯವಹಾರಗಳು ನಡೆಯುತ್ತಿವೆ. ಹಿಂದೆ ಇವರ ಬಗ್ಗೆ ಯಾರೂ ದೃಷ್ಟಿಯನ್ನು ಹರಿಸಿಲ್ಲ. ಹರಿಸಿದರೂ ಪರಿಣಾಮಕಾರಿಯಾಗಿ ಕಾರ್ಯಕ್ರಮ ತೆಗೆದುಕೊಂಡಿರಲಿಲ್ಲ. ಈಗಲಾದರೂ ಅವುಗಳ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಹೊರಟಿರುವುದು ತುಂಬಾ ಸಂತೋಷ. ಬೆಂಗಳೂರು ನಗರದಲ್ಲಿ ಇನ್ನೊಂದು ತರಹದ ಸೊಸೈಟಿಗಳಿವೆ. ಕೋಆಪರೇಟೀವ್ ಕನ್‌ಸ್ಯೂಮರ್ಸ್ ಸೊಸೈಟಿಗಳಿವೆ. ಈ ಸೊಸೈಟಿಗಳಲ್ಲಿ ಸಾಮಾನ್ಯವಾಗಿ ಜನರಿಗೆ ಬೇಕಾದಂಥ ಬಳಕೆ ವಸ್ತುಗಳನ್ನು ಮಾರಾಟ ಮಾಡುತ್ತಾರೆ. ನನ್ನ ಕ್ಷೇತ್ರದಲ್ಲಿರುವ ಕೋಆಪರೇಟೀವ್ ಕನ್‌ಸ್ಯೂಮರ್ಸ್ ಸೊಸೈಟಿಯನ್ನು ಸ್ವಲ್ಪ ತನಿಖೆ ನಡೆಸಬೇಕು ಎಂದು ನಾನು ಮಾನ್ಯ ರಂಗನಾಥ ರವರನ್ನು ಕೇಳಿಕೊಳ್ಳುತ್ತೇನೆ. ಈಗಾಗಲೇ ಒಂದರ ಬಗ್ಗೆ ತನಿಖೆ ನಡೆಸಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ, ಅದೂ ಕೂಡ ಯಶಸ್ವಿಯಾಗಿಲ್ಲ ಎಂದು ತಿಳಿದುಬಂದಿದೆ. ಅಲ್ಲೂ ಸಹ ಪ್ರಭಾವಶಾಲಿ ವ್ಯಕ್ತಿಗಳಿದ್ದಾರೆ. ಅವರು ಏನು ಹೇಳುತ್ತಾರೆಂದರೆ, ಯಾರು ಏನು ಮಾಡುತ್ತಾರೆ ಯಾರು ಬಂದರೂ ಏನೂ ಮಾಡುವುದಕ್ಕೆ ಆಗುವುದಿಲ್ಲ. ಎಂದು ಹೇಳುತ್ತಾರೆ. ಮಾನ್ಯ ರಂಗನಾಥ್‌ರವರು ನಮ್ಮ ಮಾತು ಕೇಳುತ್ತಾರೆ ಎಂದರೆ, ಚೀಫ್ ಮಿನಿಸ್ಟರ್ ಹತ್ತಿರ ಹೋಗಿ ಸರಿ ಮಾಡಿಕೊಳ್ಳುತ್ತೇವೆ, ಅವರು ನಮ್ಮ ಮೇಲೆ ವಿಶ್ವಾಸ ಇಟ್ಟಿದ್ದಾರೆ ಎನ್ನುವ ಮಟ್ಟಕ್ಕೆ ಹೋಗಿದ್ದಾರೆ. ಆದುದರಿಂದ ನನ್ನ ಕ್ಷೇತ್ರದಲ್ಲಿರತಕ್ಕ ಸೊಸೈಟಿಗಳ ತನಿಖೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಈ ಸೊಸೈಟಿಗಳಲ್ಲಿ ಇನ್ನೂ ಒಂದು ತರಹ ಸೊಸೈಟಿಗಳಿವೆ. ಮೊನ್ನೆ ತಾನೇ ಪತ್ರಿಕೆಯಲ್ಲಿ ಓದಿ ಸಂತೋಷವಾಯಿತು. ಮೈಕೊ ಹೌಸ್ ಬಿಲ್ಡಿಂಗ್ ಕೋಆಪರೇಟೀವ್ ಸೊಸೈಟಿ ಅಧಿಕಾರಿಗಳ ಮೇಲೆ ಕೇಸ್ ಹಾಕಿದ್ದಾರೆ ಎಂದು ತಿಳಿದಿದೆ ೨೩½ ಲಕ್ಷ ರೂಪಾಯಿಗಳನ್ನು ನುಂಗಿ ಹಾಕಿದ್ದಾರೆ. ಆದುದರಿಂದ ನಮ್ಮ ಬೆಂಗಳೂರು ನಗರದಲ್ಲಿರತಕ್ಕ ಹೌಸಿಂಗ್ ಕೋಆಪರೇಟೀವ್ ಸೊಸೈಟಿಗಳ ಬಗ್ಗೆ ತಾವು ಗಮನಹರಿಸಬೇಕು. ಅನೇಕ ಕಡೆ ಇದರಿಂದ ಕಾರ್ಮಿಕರಿಗೆ ತೊಂದರೆಯಾಗಿದೆ, ಅನ್ಯಾಯವಾಗಿದೆ. ಈ ಸೊಸೈಟಿಗಳಲ್ಲಿ ಡೈರೆಕ್ಟರುಗಳು ಹಲವಾರು ಪ್ರಭಾವಗಳಿಗೆ ಒಳಗಾಗಿ ಬೇಕಾದಷ್ಟು ಹಣವನ್ನು ಪಡೆದುಕೊಂಡು ಕಾರ್ಮಿಕರಿಗೆ ಅನ್ಯಾಯ ಮಾಡಿದ್ದಾರೆ. ಹೌಸ್ ಬಿಲ್ಡಿಂಗ್ ಕೋಆಪರೇಟೀವ್ ಸೊಸೈಟಿಗಳು ಜಾಗ ಕೊಂಡುಕೊಂಡು ಲೇಔಟ್ ಮಾಡಿ ಕಾರ್ಮಿಕರಿಗೆ ಹಂಚಬೇಕು. ಲೇಔಟ್ ಮಾಡುವ ವಿಷಯದಲ್ಲಿ ಪ್ರಭಾವ ಉಪಯೋಗಿಸಿ ಮಧ್ಯೆ ಇರುವ ಜನ ಬೇಕಾದಷ್ಟು ಅವ್ಯವಹಾರಗಳನ್ನು ಮಾಡುತ್ತಾ ಇದ್ದಾರೆ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ. ಸೊಸೈಟಿಗಳಿಗೆ ಕೆಟ್ಟ ಹೆಸರು ಬಂದು ಕಾರ್ಮಿಕರಿಗೆ ಅನ್ಯಾಯವಾಗಿದೆ ತೊಂದರೆಯಾಗಿದೆಯೆಂದು ತಿಳಿದುಬಂದಿದೆ. ಇದು ಮೊನ್ನೆ ಪೇಪರಿನಲ್ಲಿ ಬಂದ ವಿಷಯ. ಬೆಂಗಳೂರು ನಗರದಲ್ಲಿರತಕ್ಕ ಹೌಸ್ ಬಿಲ್ಡಿಂಗ್ ಕೋಆಪರೇಟೀವ್ ಸೊಸೈಟಿಗಳಲ್ಲಿ ಕೆಲವನ್ನಾದರೂ ತಾವು ತನಿಖೆ ನಡೆಸಬೇಕು. ಇನ್ನೊಂದು ಅಪಾಯ ಕಂಡು ಬರುವುದು ಏನೆಂದರೆ, ಸೆಕ್ಷನ್ ೧೪ (ಎ) ದಲ್ಲಿ, ಯಾವ ಸೊಸೈಟಿಗಳು ಸರಿಯಾಗಿ ಕೆಲಸಮಾಡುತ್ತಿಲ್ಲ ಎಂದು ರಿಜಿಸ್ಟ್ರಾರ್‌ರವರಿಗೆ ತಿಳಿದುಬರುತ್ತದೋ ಅವುಗಳನ್ನು ಅಮಾಲ್ಗಮೇಟ್ ಮಾಡಬೇಕು ಎಂದು ಇದೆ. ಇದರಲ್ಲಿ ತತ್ವಶಃ ಭಿನ್ನಾಭಿಪ್ರಾಯವಿಲ್ಲ. ಎಲ್ಲಾ ಸೇರಿ ಒಂದೇ ಸೊಸೈಟಿ ಮಾಡಬೇಕು ಎಂದು ಇದೆ. ಈಗ ೪ ಸೊಸೈಟಿಗಳಿದ್ದರೆ ಅದರಲ್ಲಿ ಒಂದು ಸೊಸೈಟಿ ಚೆನ್ನಾಗಿರುತ್ತದೆ ಇನ್ನು ೩ ಕೆಟ್ಟಿರುತ್ತವೆ, ಈ ನಾಲ್ಕನ್ನೂ ಸೇರಿಸಿ ಒಂದು ಮಾಡಿದರೆ ಅದರಲ್ಲಿರತಕ್ಕ ಜನಗಳನ್ನೇ ತೆಗೆದುಕೊಂಡು ಒಂದಾಗಿ ಮಾಡಬೇಕಾಗುತ್ತದೆ. ಆ ಸೊಸೈಟಿಗಳಲ್ಲಿರತಕ್ಕವರನ್ನೇ ಮೆಂಬರುಗಳನ್ನು, ಛೇರ್ಮನ್‌ರನ್ನೂ ಮಾಡಬೇಕಾಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ಬೇರೆಯವರನ್ನೂ ತೆಗೆದುಕೊಳ್ಳಬಹುದು.

ಶ್ರೀ ಎಂ. ಎಸ್ ಕೃಷ್ಣನ್.—ಹೊಸದಾಗಿ ಸೇರಿಸಿದ ಸೊಸೈಟಿಯಲ್ಲಿರತಕ್ಕ ಸದಸ್ಯರು ಇನ್ನೊಂದು ಸೊಸೈಟಿಯ ಸದಸ್ಯರಾಗಿರುತ್ತಾರೆ. ಆದುದರಿಂದ ಅವರ ಪ್ರಭಾವ ಸ್ವಲ್ಪ ಇರುತ್ತದೆ. ಆದುದರಿಂದಲೇ ನಾನು ಅಪಾಯ ಇದೆ ಎಂದು ಮಾತ್ರ ಹೇಳುತ್ತಿದ್ದೇನೆ, ಆದುದರಿಂದ ಇದಕ್ಕೆ ಒಳಗಾಗಬಾರದು ಎಂದು ಹೇಳುತ್ತಿದ್ದೇನೆ.

ನಾನು ಇತರ ಅಂಶಗಳನ್ನು ಹೇಳುವುದಿಲ್ಲ. ಏಕೆಂದರೆ ನನ್ನ ಸ್ನೇಹಿತರು ಮಾತನಾಡಿದ್ದಾರೆ. ನಾನು ಅದನ್ನು ಪುನರೋಕ್ತಿ ಮಾಡುವುದಿಲ್ಲ. ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಇನ್‌ಡೆಮ್ನಿಫೈ ಬಗ್ಗೆ ಹೇಳಿದ್ದು ನ್ಯಾಯವಾಗಿದೆ. ಸೆಕ್ಷನ್ ೧೨೭ರಲ್ಲಿ ಹೇಳಿರುವ ಹಾಗೆ ಈಗ ಮಾಡುವುದಕ್ಕೆ ಸಾಧ್ಯವೇ ? ಕಾನೂನು ಪ್ರಕಾರ ಆ ರೀತಿ ಮಾಡುವುದಕ್ಕೆ ಸಾಧ್ಯವಿದ್ದರೂ ಸಹ ಆ ರೀತಿಯಾಗಿ ಮಾಡುವುದು ಸರಿಯೋ ಎಂದು ನಾನು ಪ್ರಶ್ನೆಮಾಡುತ್ತೇನೆ ಅದು ಅಪ್ರಕೃತ. ಅಲ್ಲಿಗೆ ಅಡ್ಮಿನಿಸ್ಟ್ರೇಟರ್ ಆದರೂ ಆಗಬಹುದು ಅಥವಾ ಒಬ್ಬ ಸ್ಪೆಷಲ್ ಆಫೀಸರ್ ಆದರೂ ಆಗಬಹುದು.

ಶ್ರೀ ಕೆ ಎಚ್. ರಂಗನಾಥ್.—ಆಕ್ಟಿನಲ್ಲಿ ಅಡ್ಮಿನಿಸ್ಟ್ರೇಟರ್ ಸ್ಪೆಷಲ್ ಆಫೀಸರುಗಳನ್ನು ನೇಮಕ ಮಾಡಬಹುದೆಂದಿದೆ. ನಾನ್ ಅಫಿಷಿಯಲ್ಸನ್ನು ಅಡ್ಮಿನಿಸ್ಟ್ರೇಟರನ್ನಾಗಿ ನೇಮಕಮಾಡಬಹುದೆಂದು ಹೇಳಿದೆ.

SRI M. S. KRISHNAN.—As it exits no legal action shall lie against the Registrar in respect of any action done. You have to give protection to the Government officials though there may be some doubt expressed by Sri Puttaswamy. Then what about the Committee? Will it not lead to a dangerous situation ? ಇದರೊಳಗೆ ಅಡ್ಮಿನಿಸ್ಟ್ರೇಟರಾಗಿ ಇಲ್ಲಿ ಯಾರನ್ನಾದರೂ ತರುವುದರಲ್ಲ ಭಿನ್ನಾಭಿಪ್ರಾಯವಿಲ್ಲ.

With these few words, I support this Bill and conclude my speech.

† ಶ್ರೀ ಪಿ. ಎಂ. ಬಂಗಿ (ಜಮಖಂಡಿ) —ಮಾನ್ಯ ಅಧ್ಯಕ್ಷರೇ, ಸಹಕಾರ ಮಂತ್ರಿಗಳು ಇವತ್ತು ತಂದಿರತಕ್ಕ ತಿದ್ದುಪಡಿ ಬಗ್ಗೆ ನಾನು ಸಂಪೂರ್ಣವಾಗಿ ಬೆಂಬಲವನ್ನು ಕೊಡುತ್ತೇನೆ. ಈ ತಿದ್ದುಪಡಿಯಿಂದ ಸಣ್ಣಪುಟ್ಟ ಸೇವಾ ಸಹಕಾರ ಸಂಘಗಳ ರಿ-ಆರ್ಗನೈಜ್ ಆಗಿ ಪುನರ್ರಚಿತವಾಗಿದೆ ಅವುಗಳ ಮುಖಾಂತರ ಎಲ್ಲಾ ಹಳ್ಳಿಗಳಲ್ಲಿರತಕ್ಕ ಜನರಿಗೆಲ್ಲರಿಗೂ ಬೇಕಾದಷ್ಟು ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ. ನಮ್ಮ ರಾಜ್ಯದಲ್ಲಿ ಈಗಾಗಲೇ ಡೆಟ್ ರಿಲೀಫ್ ಆಕ್ಟ್ ಪಾಸ್ ಆಗಿದೆ. ಆದ್ದರಿಂದ ದುರ್ಬಲ ಸಾಲಗಾರರು ಯಾವತ್ತೂ ತೆಗೆದುಕೊಂಡ ಹಣವನ್ನು ವಾಪಸ್ಸು ಕೊಡುವ ಕಾರಣವಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ವೀಕರ್ ಸೆಕ್ಷನ್ಸ್‌ಗೆ ಅದರಲ್ಲಿಯೂ ಕಡು ಬಡ ಜನಗಳಿಗೆ ಸಾಲ ಇತ್ತೀಚೆಗೆ ಯಾವ ಕಡೆಯಿಂದಲೂ ಸಿಗುವುದಿಲ್ಲ ಆ ಒಂದು ಪರಿಸ್ಥಿತಿಯಲ್ಲಿ ತಾವು ಹೆಚ್ಚಿಗೆ ಗಮನಕೊಡಬೇಕು. ಒಟ್ಟಿನಲ್ಲಿ ಸೇವಾ ಸಹಕಾರ ಸಂಘಗಳ ಮೂಲಕ ಬಡ ಜನರಿಗೆ ಸಾಲ ಸಿಗುವ ವ್ಯವಸ್ಥೆಮಾಡಬೇಕೆಂದು ನಾನು ಮನಃ ಪೂರ್ವಕವಾಗಿ ಅರಿಕೆಮಾಡುತ್ತೇನೆ.

ಇನ್ನು ಎರಡನೆಯ ವಿಷಯ. ನಮ್ಮ ರಾಜ್ಯದಲ್ಲಿ ನೇಕಾರರ ಸಹಕಾರ ಸಂಘಗಳು ೭೪೯ ಇವೆ. ಪ್ರತಿಯೊಂದು ಊರಿನಲ್ಲಿ ಸುಮಾರು ೪೦-೫೦ ನೇಕಾರರ ಸಂಘಗಳನ್ನು ಮಾಡಿ ಅವುಗಳ ಮುಖಾಂತರ ರಿಬೇಟ್ ತೆಗೆದುಕೊಳ್ಳುವ ಅಭಿಪ್ರಾಯ ಇದೆ, ಇವುಗಳನ್ನು ಆದಷ್ಟು ಜಾಗ್ರತೆ ವಹಿಸಿ ಪುನರ್ರಚನೆಮಾಡಬೇಕು. ಏಕೆಂದರೆ ಕೆಲವು ಡಿಫಂಕ್ಟ್ ಸೊಸೈಟಿಗಳಿವೆ. ಮತ್ತೆ ಕೆಲವು Rabateಗೆ ಲಾಭದ ದೃಷ್ಟಿಯಿಂದ ಇರತಕ್ಕವುಗಳಾಗಿವೆ. ಅವುಗಳ ಬಗ್ಗೆ ಸರಿಯಾಗಿ ವಿಚಾರಮಾಡಿ ಡಿಫಂಕ್ಟ್ ಸೊಸೈಟಿಗಳನ್ನು ತೆಗೆದುಹಾಕಿ ಲಿಕ್ವಿಡೇಷನ್ ಮಾಡಿ ಅವುಗಳನ್ನು ಸರಿಯಾಗಿ ರಿ-ಆರ್ಗನೈಜ್ ಮಾಡಿದರೆ ಯಾವುದಾದರೂ ಒಂದು ರೀತಿಯಲ್ಲಿ ಅಂತಹ ಸೇವಾ ಸಹಕಾರ ಸಂಘಗಳು ಪುನರ್ರಚನೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆಮೇಲೆ ಅವುಗಳ ಮುಖಾಂತರ ಎಲ್ಲರಿಗೂ ಸಹಾಯಮಾಡುವ ಹಾಗೆ ಏರ್ಪಾಡು ಮಾಡಿದರೆ ಬಹಳ ಒಳ್ಳೆಯದು. ಇದೇ ಪ್ರಕಾರ ಇನ್ನು ಮುಂದೆ ನೇಕಾರರ ಬಗ್ಗೆ ಉತ್ಪಾದಕ ಮತ್ತು ಸೇಲ್‌ಗಳ ಸೊಸೈಟಿಗಳನ್ನು ಮಾಡಿ ನೇಕಾರರಿಗೆ ಸಹಾಯಮಾಡುವ ವಿಚಾರವನ್ನು ಪರಿಶೀಲನೆ ಮಾಡಬೇಕೆಂದು ನಾನು

ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾನು ತಮಗೆ ಒಂದು ಕಾಗದವನ್ನೂ ಸಹ ಇದರ ಬಗ್ಗೆ ಬರೆದಿದ್ದೇನೆ. ಆ ವಿಚಾರದಲ್ಲಿ ತೀವ್ರ ಗಮನಕೊಡಬೇಕು. ಏಕೆಂದರೆ ಎಷ್ಟೋ ನೇಕಾರರ ಸಂಘಗಳಲ್ಲಿ ಲಿಕ್ವಿಡೇಟ್ ಆಗಿ ಅಲ್ಲಿರುವ ಕಾಗದ ಪತ್ರಗಳೆಲ್ಲಾ ಸುಟ್ಟುಹೋಗಿವೆ. ಅಂತಹ ಪ್ರಸಂಗಗಳೂ ಸಹ ಇವೆ. ಕೆಲವು ನೇಕಾರರ ಸಂಘಗಳಲ್ಲಿ ಇರತಕ್ಕ ಕಾಗದ ಪತ್ರಗಳನ್ನು ಮಳೆಯಲ್ಲಿ ಮುಳುಗಿಸಿ ಬಿಟ್ಟಿದ್ದಾರೆ. ಕಳೆದು ಹೋಗಿವೆ, ಇದು ಸರಿಯಲ್ಲ. ಅಂತಹ ನೇಕಾರರ ಸಂಘಗಳನ್ನು ಗುರ್ತಿಸಿ ಅವುಗಳ ಬಗೆ ತೀವ್ರ ಗಮನ ಕೊಡಬೇಕು. ಯಾವ ಪ್ರಕಾರ ಅಗ್ರಿಕಲ್‌ಚರಲ್ ಸೊಸೈಟಿಗಳನ್ನು ಪುನರ್ರಚನೆ ಮಾಡುತ್ತಿದ್ದೀರೋ ಅದೇ ಪ್ರಕಾರ ನೇಕಾರರ ಸಂಬಂಧವಾಗಿ ಇರತಕ್ಕ ಸಹಕಾರಸಂಘಗಳನ್ನು ರಿಆರ್ಗನೈಜ್ ಮಾಡಬೇಕು. ಒಟ್ಟಿನಲ್ಲಿ ನೇಕಾರರ ಸಂಘದ ಬೆಳವಣಿಗೆಗೆ ಬೇಕಾದ ಸಹಾಯಗಳನ್ನು ಸರ್ಕಾರ ಮಾಡಿ ಅವರ ಸಂಘಗಳಿಂದ ಹೆಚ್ಚಿನ ಪ್ರೊಡಕ್ಷನ್ ಮತ್ತು ಸೇಲ್ ಆಗುವುದಕ್ಕೆ ಸಾಲದ ಸೌಲಭ್ಯಗಳನ್ನು ನೇಕಾರರಿಗೆ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಸ್. ಗುರುಸಿದ್ಧಪ್ಪ (ಬಿಳಿಗೆರೆ).—ಸನ್ಮಾನ್ಯ ಉಪಸಭಾಪತಿಯವರೇ, ಸಹಕಾರ ಸಂಘಗಳ ಬಗ್ಗೆ ಕೆಲವಾರು ತಿದ್ದುಪಡಿಗಳನ್ನು ಮಾಡುತ್ತಿದ್ದೀರಿ ಅಮಲ್ಗಮೇಷನ್ ಆಫ್ ಸೊಸೈಟಿ ಎಂಬುದಾಗಿ ಬೇರೆ ಮಾಡಿದ್ದೀರಿ. ಇದರಿಂದ ಏನು ಅನುಕೂಲವಾಗಿದೆಯೆಂದು ನನಗೆ ಅರ್ಥವಾಗುತ್ತಾ ಇಲ್ಲ. ಇದರಿಂದ ಇತ್ತೀಚೆಗೆ ಒಳ್ಳೆಯದಾಗುವುದಕ್ಕೆ ಬದಲು ಕೆಟ್ಟದ್ದೇ ಜಾಸ್ತಿಯಾಗುತ್ತಿದೆ. ಈಗ ಸುಮಾರು ಹತ್ತಾರು ಹಳ್ಳಿಗಳ ಸೊಸೈಟಿಗಳನ್ನು ಸೇರಿಸಿ ಒಂದು ಸೊಸೈಟಿ ಎಂಬುದಾಗಿ ಮಾಡಿದ್ದೀರಿ. ನಿಜವಾಗಿ ಇದರಿಂದ ಬಡ ಜನರಿಗೆ, ರೈತವರ್ಗಕ್ಕೆ ಹಾಗೂ ಕಾರ್ಮಿಕ ವರ್ಗಕ್ಕೆ ಬಹಳ ಕಷ್ಟವಾಗುತ್ತದೆ. ಏನಾದರೂ ದವಸ ಧಾನ್ಯಗಳನ್ನು ಅಥವಾ ಸಾಲವನ್ನೋ ಪಡೆಯಬೇಕಾಗಿದ್ದರೆ ಸುಮಾರು ನಾಲ್ಕೈದು ಮೈಲಿಗಳವರೆಗೂ ಅವರು ನಡೆಯಬೇಕು ಬೆಳಗ್ಗೆಯಿಂದ ಸಂಜೆಯವರೆಗೆ ಕೆಲಸಮಾಡಿ ಸುಮಾರು ನಾಲ್ಕೈದು ಮೈಲಿಗಳವರೆಗೆ ನಡೆದುಕೊಂಡು ಹೋಗಿ ರೇಷನ್ ತೆಗೆದುಕೊಳ್ಳುವುದಕ್ಕಾಗಲೀ ಅಥವಾ ಸಾಲವನ್ನು ಪಡೆಯುವುದಕ್ಕಾಗಲೀ ಬಹಳ ಕಷ್ಟವಾಗುತ್ತದೆ. ಅದು ಖಂಡಿತವಾಗಿ ಸಾಧ್ಯವಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಹಿಂದೆ ಎಲ್ಲರನ್ನೂ ಮೆಂಬರ್ ಮಾಡಿಕೊಳ್ಳುತ್ತಾ ಇರಲಿಲ್ಲ. ಎಲ್ಲರಿಗೂ ಮೆಂಬರ್‌ಷಿಪ್ ಕೊಡುತ್ತಾ ಇರಲಿಲ್ಲ. ಈಗ ಇರುವ ಹಾಗೆ ಇದ್ದರೆ ಎಲ್ಲರಿಗೂ ಮೆಂಬರ್ ಆಗಲು ಅವಕಾಶವಿದೆ. ಸರ್ಕಾರದವರು ಆ ಪಕ್ಷದವರು ಈ ಪಕ್ಷದವರು ಎಂಬುದಾಗಿ ಭೇದಭಾವ ತೋರಿಸುವುದಕ್ಕಾಗುವುದಿಲ್ಲ. ಎಲ್ಲರಿಗೂ ಅನುಕೂಲ ಉಂಟು. ಈಗ ಇರುವ ಹಾಗೆ ಇಲ್ಲದಿದ್ದರೆ ಎಲ್ಲರನ್ನೂ ಮೆಂಬರ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.— ಮುಂದೆ ಮಂತ್ರಿಗಳಿಗೆ ಈ ವಿಚಾರ ಗೊತ್ತಾಗುತ್ತದೆ. ಅಮಲ್ಗಮೇಷನ್ ಮಾಡುವುದರಿಂದ ಮುಂದೆ ಇದರ ವಿಷಯ ಅರ್ಥವಾಗುತ್ತದೆ. ಏಕೆಂದರೆ ರೈತರು ಕೂಲಿ ಮಾಡಿ ಆಮೇಲೆ ಸುಮಾರು ೫ ಮೈಲಿಗಳ ವರೆಗೆ ನಡೆದುಕೊಂಡು ಹೋಗಿ ದವಸಧಾನ್ಯಗಳನ್ನು ತೆಗೆದುಕೊಂಡು ಬರಬೇಕು ಮತ್ತು ಸಾಲವನ್ನು ಪಡೆಯಬೇಕೆಂದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಬರತಕ್ಕ ಕೂಲಿ ಬೇರೆ ಕಡಿಮೆ. ಅವರಿಗೆ ಸಾಕಷ್ಟು ಕಾಳು ಸಿಗುವುದಿಲ್ಲ.

ಇನ್ನು ಈಗ ಆಹಾರ ವಿತರಣೆಯ ಬಗ್ಗೆ ಬರೀ ಸುಳ್ಳು ಆಪಾದನೆಯನ್ನು ಮಾಡುತ್ತಿದ್ದಾರೆ. ನಿಮ್ಮ ಆಹಾರ ವಿತರಣೆ ಆಯಾ ಗ್ರೂಪ್ ಪಂಚಾಯಿತಿಯವರು ಮಾಡುತ್ತಾರೆ ಎಂಬುದಾಗಿ ಹೇಳುತ್ತೀರಿ. ಒಟ್ಟಿನಲ್ಲಿ ರೈತರಿಗೆ ಬಹು ಸುಲಭವಾಗಿ ಆಹಾರ ವಿತರಣೆಯಾಗುವ ಹಾಗೆ, ಅದು ಸುಲಭವಾಗಿ ಅವರಿಗೆ ಸಿಗುವ ವ್ಯವಸ್ಥೆ ಮಾಡಬೇಕು.

ಇನ್ನೊಂದು ವಿಷಯ ಈಗ ಡಿ-ಸೆಂಟ್ರಲೈಜ್ ಮಾಡಬೇಕೆಂದಿರುವಾಗ, ಬರೀ ಸೆಂಟ್ರಲೈಜ್ ಮಾಡುತ್ತಾ ಇರುವುದು ನಿಜವಾಗಿ ನನಗೆ ಅರ್ಥವಾಗುತ್ತಿಲ್ಲ ಈಗ ಇರತಕ್ಕ ಸೊಸೈಟಿಗಳಿಗೆ ಹೆಚ್ಚಾಗಿ ಎನ್‌ಕರೇಜ್ ಮಾಡಬೇಕು. ಕೆಲವು ಸೊಸೈಟಿಗಳಿಗೆ ಅಡ್ಮಿನಿಸ್ಟ್ರೇಟರ್ ನೇಮಿಸಬೇಕು ಡಿಫಂಕ್ಟ್ ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡಿದರೆ ಬಹಳ ಚೆನ್ನಾಗಿ ಅಲ್ಲಿನ ಆಡಳಿತ ನಡೆಯುತ್ತದೆ. ಅಂತಹ ಕಡೆಗಳಲ್ಲಿ ರಿ-ಆರ್ಗನೈಜ್ ಮಾಡಿದರೆ ಒಳ್ಳೆಯದು.

ಇನ್ನು ಕೆಲವು ಕಡೆಗಳಲ್ಲಿ ಡೈರೆಕ್ಟರ್‌ಗಳನ್ನು ನಾಮಿನೇಟ್ ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ೫೦ ಸಾವಿರ ಜನರನ್ನು ನಾಮಿನೇಟ್ ಮಾಡಬೇಕಾದ ಪರಿಸ್ಥಿತಿ ಇದೆಯೆಂದು ಹೇಳಿದ್ದಾರೆ ಆದರೆ ಆದರಲ್ಲಿಯೂ ಬಹಳ ತೊಂದರೆಗಳು ಆಗುತ್ತಿವೆ. ಅಲ್ಲಿರತಕ್ಕ ಶಾಸಕರೂ ಕೂಡ ಕೆಲವಾರು

ಡಿಫಂಕ್ಟ್ ಸೊಸೈಟಿಗಳ ಬಗ್ಗೆ ಒಂದು ಲಿಸ್ಟನ್ನು ಕೊಟ್ಟಿದ್ದಾರೆ ಅವುಗಳಲ್ಲಿ ಇಂತಿಂಥವರು ಮಿಸ್ ಅಪ್ರೋಪ್ರಿಯೇಟ್ ಮಾಡಿದ್ದಾರೆಂದು ತಿಳಿಸಿದರೂ, ಮತ್ತು ಇನ್ನು ಕೆಲವು ಸೊಸೈಟಿಗಳಲ್ಲಿ ಅಲ್ಲಿನ ಕಾರ್ಯದರ್ಶಿಗಳೂ ಸೇರಿ ಅವರ ಮುಖಾಂತರ ಎಷ್ಟೋ ಹಣ ದುರುಪಯೋಗವಾಗಿದೆಯೆಂದು ನಾನೇ ಅನೇಕ ಸಾರಿ ಮಂತ್ರಿಗಳಿಗೆ ದೂರುಗಳನ್ನು ಕೊಟ್ಟಿದ್ದರೂ ಇದುವರೆಗೆ ಅಂತಹವರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಅದರೂ ಸಹ ಯಾರದೋ ಪ್ರೆಷರಿಗೆ ಈಡ್ಡ್ ಆಗಿ ಪುನಃ ಅಂತಹವರನ್ನೇ ಕೆಲವು ಸೊಸೈಟಿಗಳಿಗೆ ನಾಮಿನೇಟ್ ಮಾಡಿರುವುದು ನಿಜವಾಗಿ ನನಗೆ ಶೋಚನೀಯವಾಗಿದೆ. ನೀವು ಈಗ ನಿಜವಾಗಿ ಸೊಸೈಟಿಗಳನ್ನು ಆಮಲ್ಗಮೇಟ್ ಮಾಡಿದರೆ, ಸೊಸೈಟಿಗಳ ಆಡಳಿತ ಬಹಳ ಸಮರ್ಪಕವಾಗಿ ನಡೆಯುತ್ತದೆಂದು ಒಂದು ಮನೋಭಾವನೆಯನ್ನು ತಾಳಿದ್ದೀರಿ. ನಾನು ಈ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಆದುವರೆಗೆ ಎಷ್ಟು ಸೊಸೈಟಿಗಳಿಗೆ ಫೈನ್ ಇಂಪೋಸ್ ಮಾಡಿದ್ದೀರಿ, ಯಾವ ರೀತಿಯ ಪನಿಷ್‌ಮೆಂಟ್‌ಗಳನ್ನು ಕೊಟ್ಟಿದ್ದೀರಿ, ಎಷ್ಟು ಸೊಸೈಟಿಗಳನ್ನು ರದ್ದುಮಾಡಿದ್ದೀರಿ ಎಂಬುದನ್ನು ನನಗೆ ತಿಳಿಸಬೇಕು. ಇವತ್ತಿನದಿವಸ ನನಗೆ ತಿಳಿದಿರುವ ಪ್ರಕಾರ ಸಾವಿರಾರು ಸೊಸೈಟಿಗಳಲ್ಲಿ ಅಲ್ಲಿರತಕ್ಕವರೇ ಅಲ್ಲಿನ ಹಣವನ್ನು ತಿಂದು ತೇಗಿ ನೀರಿನಂತೆ ಕುಡಿಯುತ್ತಿದ್ದಾರೆ ನಿಮ್ಮ ಪಾರ್ಟಿಗೆ ಅಂತಹವರು ಸೇರಿಕೊಂಡು ನಿಮ್ಮ ಒಂದು ಪ್ರೊಟೆಕ್ಷನ್ ಪಡೆಯುತ್ತಿದ್ದಾರೆ ಮಾನ್ಯ ಶ್ರೀ ರಂಗನಾಥ್ ಅವರು ಅಂತಹವರ ಮೇಲೆ ಏನು ಶಿಕ್ಷೆ ವಿಧಿಸಿದ್ದಾರೆ, ಅವರೇನೋ ದಕ್ಷ ಆಡಳಿತಗಾರರು, ನಾಮಿನೇಷನ್ ಮಾಡುವುದರಲ್ಲಿ ಕೆಲವಾರು ಪ್ರೆಷರ್‌ಗಳಿಗೊಳಗಾಗಿ ಡಿಫಂಕ್ಟ್ ಆದ ಹಳೆಯ ಸೊಸೈಟಿಗಳಿಗೆ ಈಗ ಅಧಿಕಾರವನ್ನು ಕೊಡುತ್ತಾ ಇದ್ದಾರೆ. ದುರ್ನಡತೆಯಿಂದ ಹೆಚ್ಚು ತಪ್ಪುಗಳನ್ನು ಮಾಡತಕ್ಕ ಸೊಸೈಟಿಗಳಿಗೆ ಈಗ ಅಧಿಕಾರಕೊಡುವುದಕ್ಕೆ ಹೋಗಿದ್ದಾರೆ. ಇದು ಬಹಳ ಶೋಚನೀಯವಾದುದು. ಆದ್ದರಿಂದ ನಾನು ಈ ತಿದ್ದುಪಡಿಗೆ ಒಪ್ಪಿಗೆ ಕೊಡದೆ ನನ್ನ ಮಾತನ್ನು ಮುಗಿಸುತ್ತೇನೆ.

MR DEPUTY SPEAKER —Before adjourning the House, I have an announcement to make. The Business Advisory Committee decided to discuss the situation arising out of the drought conditions in certain parts of the State on Friday the 12th November 1976.

The House will now stand adjourned and meet at 1 P. M. to-morrow.

The House adjourned at Thirty Minutes past Six of the Clock to meet again at One of the Clock on Tuesday the 9th November 1976.

ANNEXURE I

THE KARNATAKA PRIVATE NURSING HOME (REGULATION) BILL, 1976.

(L. A. Bill No. 56 of 1976)

A Bill to provide for the regulation and control of private nursing homes in the State.

Whereas the private nursing homes in the State are running in an unregulated manner and ;

Whereas it is expedient in public interest to regulate them ;

Be it enacted by the Karnataka State Legislature in the Twenty-seventh Year of the Republic of India as follows :—

1. **Short title and commencement.**—(1) This Act may be called the Karnataka Private Nursing Homes (Regulation) Act, 1976.

(2) It shall be deemed to have come into force on the Fourth day of November, 1976.

2. **Definitions.**—In this Act, unless the context otherwise requires,—

(1) 'appointed day' means the date specified in sub-section (2) of section 1 ;

(2) 'competent authority' means any person or persons or authority appointed by the State Government to perform the functions of the competent authority under this Act and different persons or authorities may be appointed to perform different functions ;

(3) 'licence' means a licence granted under the provisions of this Act ;

(4) 'Manager' in relation to a private nursing home means the person, by whatever name or designation called who is incharge of, or is entrusted with, the running of a private nursing home;

(5) 'medical treatment' means treatment in modern medicine or in any other system of medicine like the Ayurvedic, the Unani, the Homoeopathic and the Naturopathic ;

(6) 'modern medicine' means the western methods of allopathic medicine obstetrics and surgery;

(7) 'nursing home' means a hospital or a clinic or any other place where human diseases are given preventive and/or curative medical treatment ;